(*b*) The Office of the Town Planning Authority started functioning since 25th November, 1967. The purpose of constituting the Planning Authority is to prepare and enforce the master plan under the Mysore Town and Country Planning Act, so as to ensure orderly development of the city.

NOTICE OF ADJOURNMENT MOTION

Re : Search of one Smt. Sumitra Desai

ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ) : ಸನ್ಮಾನ್ಯ ಅಧ್ಯಕ್ಷರೇ, ನಾನು ನಿನ್ನೆಯೂ ದಿವಸ ತಮಗೆ ಒಂದು ಸೂಚನೆಯನ್ನು ಕಳಿಸಿದ್ದೇನೆ. ಅದರ ವಿಚಾರವಾದರೂ ಕಳೆದ ಮೂರೂವರೆ ತಿಂಗಳ ಹಿಂದೆ ನಮ್ಮ ರಾಜ್ಯ ಸರಕಾರದ ಒಬ್ಬ ಉಪಸಚಿವರ ರಾಜಿನಾಮೆಗೆ ಕಾರಣವಾದ ಪ್ರಸಂಗ. ಶ್ರೀಮತಿ ಸುಮಿತ್ರಾ ದೇಸಾಯಿಯವರು ಇದು ವರೆಗೆ ಪತ್ತೆಯಾಗಿಲ್ಲ.

ಅಧ್ಯಕ್ಷರು : ಈಗ ಮುಖ್ಯ ಮಂತ್ರಿಗಳಿಲ್ಲವಲ್ಲಾ

ಶ್ರೀ ಎಚ್. ಟಿ. ಕೃಷ್ಣಪ್ಪ : ಡೆಪ್ಯುಟಿ ಲೀಡರ್ ಇದ್ದಾರೆ. ವಿಚಾರ ವೇನೆಂದರೆ ಮೂರೂವರೆ ತಿಂಗಳ ಹಿಂದೆ ಈ ವಿಚಾರ ಈ ವಿಧಾನ ಸಭೆಯಲ್ಲಿ ಚರ್ಚೆಯಾದಾಗ ಮಾನ್ಯ ಮುಖ್ಯ ಮಂತ್ರಿಗಳು ಒಂದು ಆಶ್ವಾಸನೆ ನಮಗೆ ಕೊಟ್ಟಿದ್ದರು. ಈ ವಿಚಾರದಲ್ಲಿ ತನಿಖೆ ನಡೆಸಿ ಜನತೆಗೆ ಈ ವಿಚಾರದಲ್ಲುಂಟಾಗಿರತಕ್ಕ....

ಅಧ್ಯಕ್ಷರು : ಈಗ ನೋಟೀಸು ಕೊಟ್ಟಿದ್ದೀರಿ.

ಶ್ರೀ ಎಚ್. ಟಿ. ಕೃಷ್ಣಪ್ಪ : ಸೂಕ್ಷ್ಮವಾಗಿ ಹೇಳುತ್ತೇನೆ.

ಅಧ್ಯಕ್ಷರು . ಅದಕ್ಕೆ ಈಗ ಅಷ್ಟು ಅರ್ಜನ್ಸಿಯೇನಿದೆ? ಈ ಪ್ರಕರಣ ನಿನ್ನೆ ಮೊನ್ನೆ ಆಗಿಲ್ಲ. ಅದರ ಬಗ್ಗೆ ನಿಲುವಳಿ ಸೂಚನೆ ಕೊಟ್ಟಿದ್ದರೆ ಇಷ್ಟು ಹೇಳಬೇಕೇ?

ಶ್ರೀ ಎಚ್. ಟಿ. ಕೃಷ್ಣಪ್ಪ : ಇದರ ಚರ್ಚೆಗೆ ಅವಕಾಶ ಕೊಡಬೇಕು ಎಂದು ರೂಲ್ 59 ರ ಕೆಳಗೆ ಸೂಚನೆ ಕಳಿಸಲಾಗಿದೆ. ಸರಕಾರದ ಗಮನ ಈ ಕಡೆಗೆ ಸಳೆಯುಲು ಈ ಪ್ರಶ್ನೆ ಚರ್ಚೆಯಾಗಬೇಕು. ಈಗ ಮೂರೂವರೆ ತಿಂಗಳಿಂದ ರಾಜ್ಯದ ಪೋಲೀಸಿನವರು ತನಿಖೆ ಮಾಡಿದ್ದಾರೆ. ಅದರೂ ಕೂಡ ಆ

(ಶ್ರೀ ಹೆಚ್. ಟಿ. ಕೃಷ್ಣಪ್ಪ)

ಮಹಿಳೆಯನ್ನು ಪತ್ತೆ ಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಗೃಹ ಖಾತೆಯನ್ನು ಸಹ ಹೊಂದಿದ್ದಾರೆ. ಗೃಹ ಖಾತೆಯಲ್ಲಿ ನಮ್ಮ ಪೋಲೀಸು ಇಲಾಖೆಯಲ್ಲಿ ಉನ್ನತ ಪರಿಣತರೂ, ಸುಸಂಸ್ಕೃತರೂ, ವಿದ್ಯಾವಂತರೂ ಪಳಗಿದವರೂ ಪ್ರಶಂಸೆಗೆ ಪಾತ್ರರಾದವರೂ ಇದ್ದಾರೆ. ಆದುದರಿಂದ ಅವರಿಗೆ ಎಲ್ಲಾ ಕಡೆಯ ಪರಿಚಯವಿದೆ, ಸಂಬಂಧವಿದೆ. ಆದರೆ ಇಂಥ ಮಹಿಳೆಯನ್ನು ಪತ್ತೆ ಮಾಡಲು ಸರಕಾರ ವಿಫಲವಾಗಿದೆ. ಅಂದ ಮೇಲೆ ಸರಕಾರ ತನ್ನ ಮೂಲಭೂತವಾದ ಹೊಣೆಗಾರಿಕೆಯನ್ನು ಸರಿಯಾಗಿ ನಿರ್ವಾಹ ಮಾಡಿಲ್ಲ ಎಂಬುದು ವ್ಯಕ್ತವಾಗುವುದು. ಒಬ್ಬ ನಾಗರಿಕ ಮಹಿಳೆಯ ಮಾನ ಸಂರಕ್ಷಣೆ ಮಾಡುವ, ಪ್ರಾಣ ರಕ್ಷಣೆ ಮಾಡುವ ಕರ್ತವ್ಯವನ್ನು ಸರಕಾರ ನಿರ್ವಹಿಸಿಲ್ಲ. ಸರಕಾರ ತನ್ನ ಕರ್ತವ್ಯದಲ್ಲಿ ವಿಫಲವಾಗಿದೆ. ಇದು ಖಂಡನೀಯ. ಇದನ್ನು ಗಮನಕ್ಕೆ ತರುತ್ತಿದ್ದೇನೆ ಆದುದರಿಂದ ಈ ವಿಷಯದಲ್ಲಿ ಸಮಗ್ರವಾದ ಚರ್ಚೆಯಾಗಬೇಕು. ಮಾನ್ಯ ಮುಖ್ಯ ಮಂತ್ರಿಗಳು ಇದು ವರೆಗೆ ಪೋಲೀಸು ಇಲಾಖೆಯವರೇನು ತನಿಖೆ ಮಾಡಿದ್ದಾರೆ ಎಂಬ ವಿಚಾರದಲ್ಲೇನೂ ತಿಳಿಸದೆ ಆ ವಿಷಯವನ್ನು ಮುಚ್ಚಿಟ್ಟಿದ್ದಾರೆ. ಪೋಲೀಸು ವರದಿಯನ್ನು ಸಭೆಯ ಮುಂದಿಟ್ಟು ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಇದು ಸರಕಾರದ ಆದ್ಯ ಕರ್ತವ್ಯ. ಇದನ್ನು ಮಾಡಬೇಕೆಂದು ಒತ್ತಾಯಮಾಡುತ್ತೇನೆ. ಮುಖ್ಯ ಮಂತ್ರಿಗಳಿಗೆ ಐ. ಜಿ. ಪಿ. ಯಿಂದ ವರದಿ ಬಂದಿದೆ, ಎರಡನೆಯ ವರದಿ ಸಹ ಸಿ. ಬಿ. ಐ. ಗೆ ಈ ವಿಷಯವನ್ನು ರೆಫರ್ ಮಾಡುವುದಕ್ಕೆ ಮುಂಚೆ ಬಂದಿದೆ ಎಂಬುದು ನನಗೆ ತಿಳಿದಿದೆ. ಅದರ ಅಂಶ ನಾವು ತಿಳಿಯಬೇಕಾಗಿದೆ.

ಈ ವಿಚಾರದಲ್ಲಿ ಜನರು ಏನು ಹೇಳುತ್ತಿದ್ದಾರೆ. ಆ ಸುಮಿತ್ರ ದೇಸಾಯಿ ಅವರನ್ನು ಪೋಲೀಸರ ಸಹಾಯದಿಂದ ಸರ್ಕಾರದವರು ಕೊಲೆಮಾಡಿಸಿದ್ದಾರೆ ಎಂದು.

ಶ್ರೀ ಎಚ್. ಎನ್. ನಂಜೇಗೌಡ (ದೊಡ್ಡನೀರಾವರಿ ಮಂತ್ರಿ) :—ಮಾನ್ಯ ಅಧ್ಯಕ್ಷರೇ....

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) : ಮಾನ್ಯ ನಂಜೇಗೌಡರು....

ಅಧ್ಯಕ್ಷರು : ಮಾನ್ಯ ಕೃಷ್ಣಪ್ಪನವರಿಗೆ ಲಿಂಗಪ್ಪನವರ ಸಹಾಯವೇನೂ ಬೇಕಾಗಿಲ್ಲ. ಅವರು ಅವರನ್ನ ಡಿಫೆಂಡ್ ಮಾಡಿಕೊಳ್ಳಬಲ್ಲರು.

ಶ್ರೀ ಎಚ್. ಟಿ. ಕೃಷ್ಣಪ್ಪ :—ಜನರು ಹಾದಿ ಬೀದಿಗಳಲ್ಲಿ, ರೈಲು ಬಸ್ಸುಗಳಲ್ಲಿ ಈ ವಿಚಾರವಲ್ಲಿ ಮಾತನಾಡುತ್ತಿರುವುದನ್ನು ನೋಡಿದರೆ ಅದು ರಾಜ್ಯಕ್ಕೂ

ರಾಜ್ಯದ ಜನತೆಗೂ ಕಳಂಕವನ್ನು ತರತಕ್ಕದ್ದಾಗಿದೆ. ಆ ಸುಮಿತ್ರಾ ದೇಸಾಯಿ ಅವರು ಕಣ್ಮರೆ ಅದ ವಿಚಾರ ಇದೇ ಸಭೆಯಲ್ಲಿ ಚರ್ಚೆಗೆ ಬಂದು ಇಲ್ಲಿಗೆ ಮೂರು ತಿಂಗಳಿಗೂ ಮೇಲಾಯಿತು. ಆದರೆ ಇಲ್ಲಿಯವರೆಗೂ ಅವರೇನಾಗಿದ್ದಾರೆ ಎಂಬು ದನ್ನು ಪತ್ತೆ ಹಚ್ಚದಿದ್ದ ಮೇಲೆ ಇಷ್ಟು ದೊಡ್ಡ ಪೋಲೀಸ್ ಇಲಾಖೆಯನ್ನು ಸರ್ಕಾರ ಇಟ್ಟುಕೊಂಡಿದ್ದರಿಂದ ಆದ ಪ್ರಯೋಜನವಾದರೂ ಏನು ? ಇಲ್ಲಿಯ ವರೆಗೂ ಆಗಿರುವುದೇನು ಎಂಬುದನ್ನು ಪರಿಶೀಲಿಸಿದರೆ ಅದು ಸರ್ಕಾರದ ಮುಖಕೆ ಮಸಿ ಹಚ್ಚುವ ಕಾರ್ಯವೊಂದನ್ನು ಮುಗಿಸಿದಂತಾಗಿದೆ....

SRI H. M. CHENNABASAPPA :— Minister for Public Works) : I raise to a point of order. It is open to the Hon. Member to rise a discussion under rule 59 provided it is permitted by the Hon. Speaker. Now the Hon. member has only given notice of the motion under rule 59. When the Hon. Speaker has not permitted how can the Hon. member go into the details of the matter ?

SRI H.S. SIDDAPPA : The Chair has not said that she has not permitted.

SRI H.M. CHANNABASAPPA : What I want to say is that it would not be in the fitness of things to dilate on the subject unless the Speaker permits the matter to be raised.

SRI M. S. KRISHNAN :—(Malleswara) Rule 59 says that discussion has to be permitted by the Chair after considering all aspect of the question and the case that is going to be made out on this side. The rule reads thus

"59. Any member desirous of raising discussion on a matter of urgent public importance may give notice in writing to the Secretary specifying clearly and precisely the matter to be raised :

Provided that the notice shall be accompanied by an explanatory note stating reasons for raising a discussion on the matter in question';

(SRI M. S. KRISHNAN)

But I don't think there is any necessity for the Hon. Minister to raise a point of order and say that the Hon. Member has no right to speak at all.

SRI H. M. CHANNABASAPPA.—Hon. Member Mr. Krishnan is well-versed in twisting the matters. The proviso to the rule is very clear. It says;

> "Provided that the notice shall be accompanied by an explanatory note........

ಶ್ರೀ ಪಟೇಲ್ ನಾಗರಾಜ್ (ಚಾಮರಾಜಪೇಟೆ) :- ನಾವು ಇಲ್ಲಿ ಆ ಸುಮಿತ್ರಾದೇಸಾಯಿ ಅವರ ಹೆಸರನ್ನೆತ್ತಿದರೆ ಮಾನ್ಯ ಚನ್ನಬಸಪ್ಪನವರಿಗೇಕೆ ಅಷ್ಟು ಆಘಾತವಾಗುತ್ತಿದೆಯೋ ತಿಳಿಯುದಲ್ಲ ?

ಅಧ್ಯಕ್ಷರು :—ಈ ವಿಷಯದಲ್ಲಿ ಚರ್ಚೆ ನಡೆಯುವುದಕ್ಕೆ ಅವಕಾಶ ಕೊಡಬೇಕೇ ಬೇಡವೇ ಅನ್ನುವುದೇ ಇನ್ನೂ ತೀರ್ಮಾನವಾಗಲಿಲ್ಲ. ಆದುದರಿಂದ ಭಾಷಣಕ್ಕೆ ಯಾರಿಗೂ ಈಗ ಅವಕಾಶವಿಲ್ಲ.

SRI H. M. CHANNABASAPPA :—The proviso says:

> "Provided that the notice shall be accompanied by an explanatory note stating reasons for raising a discussion on the matter in question."

So, the explanation cannot be given now.

ಶ್ರೀ ಎಚ್. ಎಸ್. ಸಿದ್ದಪ್ಪ :—ಮಾನ್ಯ ಅಧ್ಯಕ್ಷರೇ........

ಅಧ್ಯಕ್ಷರು :—ನಾನು ಹೇಳುವುದನ್ನಿನ್ನೂ ಮುಗಿಸುವುದಕ್ಕೇ ಇಲ್ಲ ತಾವಾಗಲೇ ಎದ್ದರೆ ನಾನು ಏನು ಹೇಳಲಿ ? ಅನೇಕ ಸದಸ್ಯರು ನನಗೆ ಇಂಥ ಮೋಷನ್ನುಗಳನ್ನು ಕಳುಹಿಸುವಾಗ ಅದಕ್ಕೆ ಸಂಬಂಧಪಟ್ಟ ರೂಲ್‌ಗಳನ್ನೂ ಹಾಕಿ ಅದರ ಜೊತೆಗೆ ಒಂದು ಎಕ್ಸ್‌ಪ್ಲನೇಟರಿ ನೋಟನ್ನೂ ಸಹಾ ಇಟ್ಟು ಕಳುಹಿಸಿ ಕೊಡುತ್ತಾರೆ. ಆದರೇ ಚರ್ಚೆಗೆ ತೆಗೆದುಕೊಳ್ಳತಕ್ಕ ಅಗತ್ಯ ಅದರಲ್ಲಿ ಅಡಕವಾಗಿದೆಯೋ, ಅದು ರೀಸೆಂಟ್ ಅಕ್ಕರೆನ್ಸೋ ಇತ್ಯಾದಿ ಅಂಶಗಳನ್ನೆಲ್ಲಾ ನೋಡಬೇಕು.

ಶ್ರೀ ವಾಟಾಳ್ ನಾಗರಾಜ್ :—ತಾಯಿ ಅವರಲ್ಲಿ ಒಂದು ಪ್ರಾರ್ಥನೆ ಆ ಸುಮಿತ್ರಾದೇಸಾಯಿ ಅವರ ಬಗ್ಗೆ ರಾಜ್ಯದಲ್ಲಿ ಎಲ್ಲ ಜನತೆಗೂ ಬಹಳ ಕಾತುರತೆ ಇದೆ.........

ಅಧ್ಯಕ್ಷರು :—ಇರಲಿ. ತಾವು ದಯ ಮಾಡಿ ಕುಳಿತುಕೊಳ್ಳಬೇಕು. ಇದು ನಾಲ್ಕೈದು ತಿಂಗಳ ಹಿಂದಿನ ಸಮಾಚಾರ. ಆದುದರಿಂದ ಇದನ್ನು ನಿಲುವಳಿ ಸೂಚನೆಯನ್ನಾಗಿ ತೆಗೆದುಕೊಳ್ಳಲು ಅನುಮತಿ ಕೊಡುವುದಕ್ಕೆ ಬರುವುದಿಲ್ಲ.

SRI D. DEVARAJ URS :—With the permission of the Chair, I would like to say that while addressing the Speaker it may not be in consonance with the dignity of the House to address as "ಅಮ್ಮಾ" ಅಥವಾ "ತಾಯಿ".

ಶ್ರೀ ಎಂ. ಎಸ್. ಕೃಷ್ಣನ್ :—ಹಾಗಾದರೆ ಕನ್ನಡದಲ್ಲಿ ಸದಸ್ಯರು ಅಧ್ಯಕ್ಷರನ್ನು ಯಾವ ರೀತಿ ಅಡ್ರೆಸ್ ಮಾಡಬೇಕೆಂಬುದನ್ನು ತಾವೇ ತಿಳಿಸಿಕೊಡಿ.........

ಶ್ರೀ ಡಿ. ದೇವರಾಜ ಅರಸ್ :—"ಮಾನ್ಯ ಅಧ್ಯಕ್ಷರೇ," ಅಥವಾ "ಅಧ್ಯಕ್ಷಣಿಯರೇ" ಎಂದು ಹೇಳಿದರೆ ಅಷ್ಟು ಸಾಕು.

ಶ್ರೀ ಬಿ. ಪುಟ್ಟಸ್ವಾಮಯ್ಯ, (ರಾಮನಗರ) :—ಅಧ್ಯಕ್ಷರನ್ನು ಕಂಡಾಗ ಅದರ ಬಗ್ಗೆ ನನಗೆ ತಾಯಿಯ ಭಾವನೆಯೇ ಬರುತ್ತದೆ. ಆದುದರಿಂದ ನಾನು ಅವರನ್ನು "ತಾಯಿ" ಎಂದು ಹೇಳುತ್ತೇನೆ. ಅದಕ್ಕೆ ತಾವೇಕೆ ಅಡ್ಡಿ ತರುತ್ತಿದ್ದೀರಿ?

ಶ್ರೀ ಡಿ. ದೇವರಾಜ ಅರಸ್ :—ನಾನು ಇನ್ನಾವ ಭಾವನೆಯಿಂದಲೂ ಹೇಳುತ್ತಿಲ್ಲ. ಅವರ ಸಭಾ ಮರ್ಯಾದೆಗೆ ತಕ್ಕಂತೆ ಇರಲಿ ಎಂಬ ಉದ್ದೇಶದಿಂದ ನಾನು ಅವರನ್ನು "ಅಧ್ಯಕ್ಷರೇ" ಅಥವಾ "ಅಧ್ಯಕ್ಷಣಿಯರೇ" ಎಂದು ಅಡ್ರೆಸ್ ಮಾಡಿದರೆ ಸರಿಯಾಗಿರುತ್ತದೆಂದು ಹೇಳಿದೆ.

† ಶ್ರೀ ಎಚ್. ಟಿ. ಕೃಷ್ಣಪ್ಪ :—ಇಲ್ಲಿ ಉದ್ಭವಿಸಿರತಕ್ಕ ಮುಖ್ಯ ಪ್ರಶ್ನೆ ಒಂದು ಏನೆಂದರೆ ಆ ಸುಮಿತ್ರಾ ದೇಸಾಯಿ ಅವರು ಕ್ಷಮ್ಮರೆಯಾದ ಪ್ರಸಂಗದಲ್ಲಿ ಏಕೆ ಜನರು ಅಷ್ಟು ಕಾತುರರಾಗಿದ್ದಾರೆ, ಎಂದರೆ ಇದೇ ಸುಮಿತ್ರಾ ದೇಸಾಯಿ ಅವರ ಪ್ರಕರಣದಲ್ಲಿ ಒಬ್ಬ ರಾಜ್ಯದ ಮಂತ್ರಿಗಳು ರಾಜೀನಾಮೆ ಕೊಡಬೇಕಾದ ಪ್ರಸಂಗವುಂಟಾಯಿತು. ಹಾಗೆ ಆ ಮಂತ್ರಿಗಳು ಕೊಟ್ಟ ರಾಜೀನಾಮೆ ಪತ್ರದಲ್ಲಿ

(ಶ್ರೀ ಹೆಚ್. ಟಿ. ಕೃಷ್ಣಪ್ಪ)

ಈ ಪ್ರಸಂಗದಲ್ಲಿ ಎದ್ದಿರತಕ್ಕ ಗೊಂದಲದ ಬಗ್ಗೆ ಒಂದು ತನಿಖೆ ನಡೆಯಬೇಕಾಗಿರುವುದರಿಂದ ಆ ತನಿಖೆ ಸುಗಮವಾಗಿ ನಡೆಯಲೆಂದು ತಾವು ರಾಜೀನಾಮೆ ಕೊಟ್ಟಿದ್ದಾಗಿ ಅವರು ನಮೂದಿಸಿದ್ದಾರೆ. ಅಂದಾಗ ಸರ್ಕಾರದವರು ಈ ವಿಚಾರದಲ್ಲಿ ಇಲ್ಲಿಯತನಕ ಏನು ತನಿಖೆ ನಡೆಸಿದ್ದಾರೆ ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಗೆ ಹೆಚ್ಚಿನ ಬೆಳಕನ್ನು ಚೆಲ್ಲಬೇಕಾಗಿದೆ. ಆದರೆ ಇತ್ತೀಚೆಗೆ ಒಂದು ಪತ್ರಿಕೆಯಲ್ಲಿ "ಮುಖ್ಯ ಮಂತ್ರಿಗಳು ಆ ಸುಮಿತ್ರಾ ದೇಸಾಯಿ ಕಣ್ಮರೆಯೊದ ಬಗ್ಗೆ ನಾನೇನು ಮಾಡುವುದಕ್ಕಾಗುತ್ತದೆ? ಅದಕ್ಕೆ ಮತ್ತೆ ವಿಶ್ವಾಮಿತ್ರ ಸೃಷ್ಟಿಯಾಗಬೇಕು." ಎಂದು ಹೇಳಿದರೆಂದು ವರದಿಯೊಗಿರುವುದು, ಖಂಡಿತವಾಗಿಯೂ ಒಂದು ಜವಾಬ್ದಾರಿ ಸ್ಥಾನದಲ್ಲಿರುವಂಥ ಮುಖ್ಯ ಮಂತ್ರಿಗಳ ಬಾಯಿಂದ ಬರತಕ್ಕ ಮಾತಲ್ಲ ಅವು. ಆದರೆ ಇದರ ಮುಂದಿನ ತನಿಖೆಯನ್ನು ಮುಖ್ಯ ಮಂತ್ರಿಗಳು ಸಿ. ಬಿ. ಐ ಗೆ ವಹಿಸಿದರೆ ಅಷ್ಟಕ್ಕೆ ಈ ವಿಚಾರದಲ್ಲಿ ಮುಖ್ಯ ಮಂತ್ರಿಗಳ ಒಂದು ಜವಾಬ್ದಾರಿ ತಪ್ಪಿತೇ? ಇದರ ವಿಚಾರಣೆಯನ್ನು ಸಿ.ಬಿ.ಐ. ಗೆ ಹಿವಸುವುದಕ್ಕೆ ಮುನ್ನ ಇವರು ಆ ಕಳೆದ ಮೂರುವರೆ ತಿಂಗಳ ಅವಧಿಯಲ್ಲಿ ಏನು ಕಾರ್ಯಕ್ರಮಗಳನ್ನು ಕೈಗೊಂಡಿದ್ದರು? ಇವರು ಆ ಅವಧಿಯಲ್ಲಿ ಇದರ ಬಗ್ಗೆ ಸಾಧಿಸಿದ್ದಾದರೂ ಏನು? ಇವರು ತಮ್ಮ ಕೈಲಿ ಇಂಥ ಒಂದು ದೊಡ್ಡ ಗೃಹಖಾತೆಯನ್ನು ಇಟ್ಟುಕೊಂಡು ತಾವು ಇದನ್ನು ಪತ್ತೆ ಹಚ್ಚದ್ದಿದ್ದುದು ಇಡೀ ಮೈಸೂರು ಪೋಲೀಸ್ ಇಲಾಖೆಗೂ ಮತು ಮೈಸೂರು ರಾಜ್ಯಕ್ಕೂ ಅಪಮಾನ ಎದ್ದು ಕಾಣುತ್ತಿದೆ. It is a Cognizable offence ಇದಕ್ಕೆ ಬೇರೆಯವರಿಂದ ಹೆಚ್ಚಿನ ವರಾತವೇನೂ ಬೇಕಾಗಿಲ್ಲ. ಆದುದರಿಂದ ನಾನು ಈ ಸಂದರ್ಭದಲ್ಲಿ ಅಧ್ಯಕ್ಷರಲ್ಲಿ ಪ್ರಾರ್ಥಿಸಿಕೊಳ್ಳುವುದು ಏನೆಂದರೆ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ಅವರ. ಪೋಲೀಸ್ ಇಲಾಖೆ ಮುಖ್ಯಾಧಿಕಾರಿಗಳೇನು ತಿಳಿಸಿದ್ದರು, ಅವರೇನು ಅದರ ಬಗ್ಗೆ ತನಿಖೆ ನಡೆಸಿದರು ಮತ್ತು ಈ ಮಧ್ಯೆ ಏನೇನು ಕರೆಸ್‌ಪಾಂಡೆನ್ಸ್ ಸರ್ಕಾರಕ್ಕೂ ಪೋಲೀಸ್ ಇಲಾಖೆಗೂ ನಡೆದಿದೆ, ಎಂಬುದನ್ನು ಸಭೆಗೆ ತಿಳಿಸುವ ತನಕ ನಾವು ಈ ಸಭೆಯ ಮುಂದಿನ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಖಂಡಿತಾ ಅವಕಾಶ ಕೊಡುವುದಿಲ್ಲ.

† ಶ್ರೀ ವಾಟಾಳ್ ನಾಗರಾಜ್ :—ಮಾನ್ಯ ಅಧ್ಯಕ್ಷರೇ ನಾನೂ ಕೂಡ ಇದೇ ವಿಚಾರದಲ್ಲಿ ತಮ್ಮ ಕಡೆಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಇದರ ಬಗ್ಗೆ ಒಂದು ರಾಜಕೀಯ ನಡೆಸಬೇಕೆಂಬ ಇಚ್ಛೆ ನಮಗೆ ಇಲ್ಲ. ಆದರೆ ಹಿಂದೆ ಈ ಸಭೆ ಹಠಾತ್ತಾಗಿ ಮುಂದೂಡಲ್ಪಟ್ಟಿತು. ಮೊನ್ನೆ ಒಂದು ಪತ್ರಿಕೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಒಂದು ಹೇಳಿಕೆಯನ್ನು ಕೊಡುತ್ತಾ ,, ಅರಸೂರವರ ಸ್ಪಷ್ಟನೆ'' "ಸುಮಿತ್ರಾ ದೇಸಾಯಿ ಪ್ರಸಂಗದಲ್ಲಿ ರಾಜೀನಾಮೆ ಕೊಟ್ಟು ಮಂತ್ರಿ

ಗಳು ನಿರಪರಾಧಿಗಳು ಅದಾಗ್ಯೂ ಅವರಿಗೆ ಮತ್ತೆ ಮಂತ್ರಿಮಂಡಲದಲ್ಲಿ ಸ್ಥಾನವಿಲ್ಲ ಎಂದು ವರದಿಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಕಿತ್ತೂರ್ ಅವರು ಈ ವಿಚಾರದಲ್ಲಿ ನಿರಪರಾಧಿಗಳು ಎಂದು ಯಾವ ಆಧಾರಗಳ ಮೇಲೆ ಆ ತೀರ್ಮಾನಕ್ಕೆ ಬಂದರು? ಹಾಗೆ ಅವರು ನಿರಪರಾಧಿಗಳಾಗಿದ್ದ ಪಕ್ಷದಲ್ಲಿ ಅವರನ್ನು ಪುನಹ ಏಕೆ ಮಂತ್ರಿಯಾಗಿ ಅವರನ್ನು ಇವರು ತೆಗೆದುಕೊಳ್ಳಲಿಲ್ಲ? ಅವರು ನಿರಪರಾಧಿಗಳಾಗಿದ್ದರೆ ಮತ್ತೆ ಅವರಿಗೆ ಕ್ಯಾಬಿನೆಟ್ಟಿನಲ್ಲಿರುವುದಕ್ಕೆ ಒಂದು ಸ್ಥಾನ ಅಡಕವಾಗಿರಲೇ ಬೇಕು.

ಈಗ ಇವೆಲ್ಲವನ್ನೂ ಬಿಟ್ಟು ಈ ವಿಚಾರವನ್ನು ಸಿ. ಬಿ. ಐ. ಗೆ ಒಪ್ಪಿಸಿರುವುದು ಒಂದು ಮುಖ್ಯವಾದಂಥ ನಿರ್ಣಯವೆಂದು ಹೇಳುತ್ತಿದ್ದಾರೆ. ಅವರು ನಿರಪರಾಧಿ ಅಂದಮೇಲೆ ಅವರಿಗೇಕೆ ಮಂತ್ರಿಸ್ಥಾನವಿಲ್ಲ. ಅವರೇ ಅಗಲಿ ಅವರು ನಿರಪರಾಧಿಯಾದ ಮೇಲೆ ಅವರು ಮಂತ್ರಿಸ್ಥಾನವನ್ನು ಏಕೆ ಬಿಡಬೇಕು? ಅವರಿಗೆ ಇಲ್ಲಿ ಮಂತ್ರಿಸ್ಥಾನ ಇಲ್ಲವೆಂದ ಮೇಲೆ ಅವರು ಅಪರಾಧಿಯಾಗಿರಬೇಕೆಂದು ಹೇಳಬೇಕಾಗುತ್ತದೆ.

2-0 p. m.

ಅಧ್ಯಕ್ಷರು : ಈ ವಿಚಾರವನ್ನು ಈ ಸಭೆಯಲ್ಲಿ ಇನ್ನೂ ಚರ್ಚೆಮಾಡಲು ಅವಕಾಶ ಕೊಡಬೇಕೋ ಬೇಡವೋ ಎಂಬುದಾಗಿ ಯೋಚನೆ ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಈ ವಿಚಾರವನ್ನು ಪತ್ತೆ ಮಾಡುವ ಕಾರ್ಯವನ್ನು ಈಗಾಗಲೇ ಸಿ. ಬಿ. ಐ. ಗೆ ಬಿಟ್ಟಿದ್ದೇವೆ, ಇನ್ನು ಬೇರೆ ವಿಷಯಗಳನ್ನು ನಾವು ನೋಡಿಕೊಳ್ಳುತ್ತೇವೆಂದು ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳು ಗೃಹಶಾಖೆಯ ಆಡಳಿತವನ್ನು ಅವರ ಕೈಲಿ ಇಟ್ಟುಕೊಂಡಿರುವುದರಿಂದ ಸುಮಾರು ಮೂರುವರೆ ತಿಂಗಳುಗಳಿಂದ ಇದರ ಬಗ್ಗೆ ಏನೇನು ವ್ಯವಹಾರ ನಡೆದಿದೆ, ಏನೇನು ಮಾಹಿತಿಗಳು ಇವರಿಗೆ ಬಂದಿವೆ ಅವೆಲ್ಲನ್ನೂ ಅವರು ಈ ಸಭೆಯಲ್ಲಿ ವಿವರವಾಗಿ ಕೊಟ್ಟು ಅವುಗಳ ಬಗ್ಗೆ ಇಲ್ಲಿ ಚರ್ಚೆಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಇದು ಅತಿ ಮುಖ್ಯವಾದುದು. ಎಲ್ಲಕ್ಕಿಂತಲೂ ಹೆಚ್ಚಾಗಿ ಈ ವಿಚಾರವನ್ನು ಎಲ್ಲೆಲ್ಲಿಯೂ ಮಾತನಾಡುತ್ತಿದ್ದಾರೆ. ಇದು ಎಲ್ಲರ ಮನದಲ್ಲಿಯೂ ಕೇಂದ್ರಿಕೃತವಾಗಿದೆ. ಆದ್ದರಿಂದ ತಾವು ಈ ವಿಚಾರವನ್ನು ಇಲ್ಲಿ ಚರ್ಚೆಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಇದನ್ನು ಖಂಡಿತವಾಗಿ ತಾವು ತಳ್ಳಿಹಾಕಬಾರದು.

ಶ್ರೀ ಎಂ. ಎಸ್. ಕೃಷ್ಣನ್ : ಈ ವಿಚಾರ ಇಲ್ಲಿ ಮೊದಲೇ ಚರ್ಚೆಯಾಗಿದೆ. ಈಗ ಇದರ ಬಗ್ಗೆ ನಾನು ಕೆಲವಾರು ವಿಷಯಗಳನ್ನು ಹೇಳಬೇಕಾಗಿದೆ. ಇದು ನಡೆದು ಈಗ್ಗೆ ಮೂರುವರೆ ತಿಂಗಳಾದುವು. ಇದರ ವಿಚಾರವಾಗಿ ವಿವರವಾಗಿ ನನ್ನ ಮಿತ್ರರು ಈಗಾಗಲೇ ಹೇಳಿದ್ದಾರೆ. ಈ ಪ್ರಶ್ನೆ ಈಗ ಏನಾಗಿದೆಯೆಂದರೆ, ಬರೀ ಮೈಸೂರು ರಾಜ್ಯಕ್ಕೆ ಮಾತ್ರ ಇವತ್ತಿನ ದಿವಸ ಅನ್ವಯಿಸುವ ರೀತಿಯಲ್ಲಿದ್ದಿದ್ದರೆ, ಕೇವಲ ಇದು ಮೈಸೂರಿಗೆ ಮಾತ್ರ ಸೀಮಿತವಾಗಿದೆ, ನೋಡೋಣ, ಮುಂದೆ ಯೋಚನೆ ಮಾಡೋಣವೆನ್ನಬಹುದಾಗಿತ್ತು. ಆದರೆ ಇದು ಹಾಗಲ್ಲ. ಇವತ್ತು ಏನಾಗಿದೆಯೆಂದರೆ, ಈ ವಿಚಾರ ಮೈಸೂರು ರಾಜ್ಯದ ಗಡಿ ಬಿಟ್ಟು ದೇಶಾದ್ಯಂತ ಹರಡುತ್ತಿದೆ. ಆ ವಿಚಾರವನ್ನೂ ತಾವು ಓದಿದ್ದೀರಿ ಎಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ಈ ವಿಚಾರದಲ್ಲಿ ಆಗಾಗ್ಗೆ ವರ್ತಮಾನ ಪತ್ರಿಕೆಗಳಲ್ಲಿ ಬರುತ್ತಾ ಇರತಕ್ಕ ವರದಿಗಳನ್ನು ನೋಡುತ್ತಿದ್ದರೆ ನನಗೆ ಒಂದು ಭಯಾನಕವಾದ ಚಿತ್ರ ನನ್ನ ಕಣ್ಣಮುಂದೆ ಬರುತ್ತಿದೆಯೆಂಬುದನ್ನು ತಾವು ಗಮನಿಸಬೇಕು. ಒಂದು ದೃಷ್ಟಾಂತ ಕೊಡುವುದಾದರೆ, ಬೊಂಬಾಯಿನಲ್ಲಿ ಜೂನ್ 1ರಂದು ಸುಮಿತ್ರಾ ದೇಸಾಯಿ ಅವರ ಡೈರಿ ಸಿಕ್ಕಿತ್ತು. ಅದು ಬೊಂಬಾಯಿನ ಪೋಲೀಸಿನವರ ಕೈಲಿ ಸೇರಿದೆ ಎಂದು ವರದಿ ಬಂದಿದೆ. ಅದರಲ್ಲಿ ಯಾರ್ಯಾರೋ ಮಂತ್ರಿಗಳ ಹೆಸರು ಇದೆಯಂತೆ, ಮಹಾರಾಷ್ಟ್ರದ ಮಂತ್ರಿಗಳ ಹೆಸರೂ ಇದೆ, ಕೇಂದ್ರ ಸರ್ಕಾರದ ಮಂತ್ರಿಗಳ ಹೆಸರೂ ಸಹ ಇವೆಯೆಂದು ಪತ್ರಿಕೆಗಳಲ್ಲಿ ಬಂದಿವೆ. ಇದರ ಜೊತೆಗೆ ಜೂನ್ 3ನೇ ತಾರೀಕಿನಲ್ಲಿ ಕಲ್ಕತ್ತಾದ ಅಮೃತ ಬಜಾರ್ ಪತ್ರಿಕೆಯೊಳಗೆ ಸುಮಿತ್ರಾ ದೇಸಾಯಿಯವರು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಎಡಿಟರಿಗೆ ಒಂದು ಕಾಗದ ಬರೆದಿರುವುದೂ ಕೂಡ ಬಂದಿದೆ, ಅದರಲ್ಲಿ ಅವರು ನನ್ನ ಮೇಲೆ ಸುಮ್ಮನೆ ಅಪಪ್ರಚಾರ ಮಾಡುತ್ತಿದ್ದಾರೆ, ನನ್ನ ಬಗ್ಗೆ ಈ ರೀತಿಯಾಗಿ ಹೇಳುವುದು ಸರಿಯಲ್ಲವೆಂದು ನಮೂದು ಮಾಡಿದೆ ಎಂಬುದಾಗಿ ಪತ್ರಿಕೆಯಲ್ಲಿ ತಿಳಿಸಿದ್ದಾರೆ. ಈ ವಿಚಾರ ಕಲ್ಕತ್ತ, ಮಹಾರಾಷ್ಟ್ರ, ಡೆಲ್ಲಿ, ಬೀರೂರು, ಅರಸೀಕೆರೆ ತಿಪಟೂರ,-ಹೀಗೆ ಇನ್ನೂ ಅನೇಕ ಕಡೆಗಳಲ್ಲಿ ಹರಡಿದೆ ಈ ಪ್ರಶ್ನೆ ಇಲ್ಲಿಗೆ ಮಾತ್ರ ಸೀಮಿತವಾಗಿದ್ದರೆ ಈ ವಿಚಾರವನ್ನು ಇನ್ನೂ ಇತ್ಯರ್ಥಮಾಡಲು ನಿಧಾನ ಮಾಡಬಹುದಾಗಿತ್ತು. ಇದೇನೂ ಇಲ್ಲಿಗೇ ಸೀಮಿತವಾಗಿಲ್ಲ. ಆದ್ದರಿಂದ ಈ ವಿಚಾರವನ್ನು ಇಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು. ಆದರೆ ಏನು ಕಾರಣ ಮಾನ್ಯ ಶ್ರೀ ಕಿತ್ತೂರ್ ಅವರ ಮೇಲೆ ತಪ್ಪು ಹೊರಿಸಿ ಅವರನ್ನು ಮಂತ್ರಿ ಮಂಡಲದಿಂದ ಕಿತ್ತು ಹಾಕಬೇಕೆಂಬ ಅಭಿಪ್ರಾಯ ಯಾರಿಗಾದರೂ ಹಿಂದೆ ಬಂದಿದ್ದರೆ, ಅದು ನಿಜವಾಗಿ ಸರಿಯಲ್ಲ.

ಅಧ್ಯಕ್ಷರು : ಆ ರೀತಿಯಾಗಿ ತಾವು ಏಕೆ ಹೇಳುತ್ತಿದ್ದೀರಿ ಎಂಬುದು ನನಗೆ ಗೊತ್ತಿದೆ.

ಶ್ರೀ ಪಾಟಾಳ್ ನಾಗರಾಜ್: ಮಾನ್ಯ ಶ್ರೀ ಕಿತ್ತೂರ್ ಅವರು ತಮ್ಮ ಎದುರಿಗೇ ಕೂತಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್: ನಮ್ಮಲ್ಲಿ ಒಂದು ಗಾದೆ ಇದೆ, ಗಾಣಗಿತ್ತಿ ಅಯ್ಯೋ ಅಂದರೆ ಮಗುವಿನ ತಲೆ ತಣ್ಣಗಾಯಿತೇ ಎಂದು. ಇಲ್ಲಿ ಆ ರೀತಿ ಯಾಗಿದೆ ಇವರು ಹೇಳುತ್ತಿರುವುದು.

ಶ್ರೀ ಎಂ. ಎಸ್. ಕೃಷ್ಣನ್; ನಾವೇನೂ ಗಾಣಗಿತ್ತಿಯಲ್ಲ. ನೀವು ಈಗ ಎಣ್ಣೆಗೂ ಬರಗಾಲವನ್ನು ತಂದಿದ್ದೀರಿ. ಮಾಸ್ಟರ್ ಹಿರಣ್ಣಯ್ಯನವರು ಅವರ 'ನಡುಬೀದಿ ನಾರಾಯಣ' ನಾಟಕದಲ್ಲಿ ಇವರು ಮುಟ್ಟಿದ್ದೆಲ್ಲಾ ಹಾಳು ಎಂಬ ವಿಷಯವಾಗಿ ಬಹಳ ಚೆನ್ನಾಗಿ ಹೇಳಿದ್ದಾರೆ. ಏಕೆಂದರೆ ಸಕ್ಕರೆ, ಗೋಧಿ, ಅಕ್ಕಿ, ಎಣ್ಣೆ ಇವುಗಳಿಗೆ ಕಂಟ್ರೋಲ್ ತರುತ್ತೇವೆಂದು ಹೋಗಿ ಎಲ್ಲವೂ ಅಭಾವ ವಾಗಿದೆ, ಮಾಯವಾಗುತ್ತಿದೆ. ಬಡವರಿಗೆ ಸಾಕಷ್ಟು ಸುಲಭವಾಗಿ ಅವು ಸಿಗು ತ್ತಿಲ್ಲ. ಹಾಗೆಯೇ ಹೆಣ್ಣನ್ನು ಮುಟ್ಟಿದರೂ, ಅದೂ ಕೂಡ ಮಾಯವಾಯಿತು, ಇದು ಜನರಿಗೆ ನಗುಪಾಟಲಾಗಿದೆ ಈ ವಿಚಾರವಾಗಿ ಇಲ್ಲಿ ಚರ್ಚೆ ಬಂದಾಗ, ಎಲ್ಲಾ ಅಂಶಗಳನ್ನೂ ನಾನು ವಿವರವಾಗಿ ಹೇಳುತ್ತೇನೆ. ಮಿಸ್ ಸುಮಿತ್ರಾ ದೇಸಾಯಿ ಅವರ ವಿಷಯದಲ್ಲಿ ಟೈಮ್ಸ್ ಆಫ್ ಇಂಡಿಯಾದಲ್ಲಿ ಭಾರಿ ಡೀಟೇಲ್ಸ್ ಕೊಟ್ಟಿದ್ದಾರೆ. ನಾನು ಅದೆಲ್ಲವನ್ನೂ ಓದುವುದಕ್ಕೆ ಹೋಗುವುದಿಲ್ಲ, ಅದರಲ್ಲಿ ಈ ರೀತಿ ಇದೆ:-"Miss Sumitra Desai meets high dignitaries"

Mr. Kittur is a teetotaller and father of five children who claimed that he was innocent. I shall face any enquiry and truth must be found out. I have resigned to safeguard the interest of the Congress and the Government".

It is a brave and correct statement

ಈ ವಿಚಾರ ನಡೆದು ಮೂರುವರೆ ತಿಂಗಳಾದರೂ ಈ ಕೇಸು ಇನ್ನೂ ಸಾಬೀತು ಆಗದೇ ಹೋದರೆ ಹೇಗೆ? ನನ್ನ ಮಿತ್ರರಾದ ಮಾನ್ಯ ಶ್ರೀ ಪಾಟಾಳ್ ನಾಗರಾಜ್ ಅವರು ಹೇಳಿದ್ದು ಸರಿ ಇರಬೇಕು. ಅವರು ಇವರನ್ನು ನಿರಪರಾಧಿ ಎಂದು ಹೇಳಿದರು. ಇವರು ನಿಜವಾಗಿ ತಪ್ಪುಮಾಡಿದ್ದರೆ, ಅದು ಪ್ರೂವ್ ಆದರೆ ಅವರು ಅಪರಾಧಿ ಎಂಬುದಾಗಿ ಹೇಳಬಹುದು. ಇವರು ಮಾತ್ರ ತಪ್ಪು ಮಾಡಿಲ್ಲ, ಇವರ ಜೊತೆಯಲ್ಲಿ ಇನ್ನೂ ಕೆಲವರು ಒಂದು ಜಾಯಿಂಟ್ ಸ್ಟಾಕ್ ಕಂಪೆನಿ ಇದ್ದಹಾಗೆ ಸೇರಿಕೊಂಡಿದ್ದಾರೆಂದು ಅನೇಕರು

ಶ್ರೀಎಂ. ಎಸ್. ಕೃಷ್ಣನ್

ಮಾತನಾಡಿಕೊಳ್ಳುತ್ತಿದ್ದಾರೆ. ಅಂದ ಮೇಲೆ ಈ ಕೇಸಿನಲ್ಲಿ ಇನ್ನೂ ಯಾರ್ಯಾರು ಮಂತ್ರಿಗಳು ಇದ್ದಾರೋ ನನಗೆ ಗೊತ್ತಾಗಲಿಲ್ಲ ಯಾರೋ ಒಬ್ಬರು ಹೈಕೋರ್ಟಿನವರ ಹೆಸರೂ ಕೂಡ ಇದರಲ್ಲಿ ಬಂದಿದೆ.

ಅಧ್ಯಕ್ಷರು ಮಾನ್ಯ ಸದಸ್ಯರು ಹೇಳುತ್ತಿರುವುದೇನು?

Sri B. BASAVALINGAPPA ; Madam Speaker, I have not heard of any unfair statement made by any hon. member of this house, than this. He tries to sermonise. Where is the complaint ? According to Criminal Procedure Code, first there must be a complaint.

ಶ್ರೀ ಎಸ್. ವೈ. ಪಾಟೀಲ್.—ನಾನು ಸಭಾಧ್ಯಕ್ಷರ ಮುಖಾಂತರ ಹೇಳುತ್ತಿದ್ದೇನೆ. ಈ ವಿಚಾರದಲ್ಲಿ ಮಾತನಾಡಲು ನಮಗೂ ಸ್ವಲ್ಪ ಜವಾಬ್ದಾರಿ ಇದೆ.

ಶ್ರೀ ವಾಟಾಳ್ ನಾಗರಾಜ್.—ನಮ್ಮಲ್ಲಿ ಒಂದು ಗಾದೆ ಇದೆ, ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿ ಕೊಂಡನಂತೆ ' ಎನ್ನುವ ಹಾಗೆ ಮಾನ್ಯ ಶ್ರೀ ಬಸವಲಿಂಗಪ್ಪನವರು ಏಕೆ ಎಷ್ಟು ಉದ್ರೇಕ ಆಗಬೇಕು? ಎಲ್ಲೋ ಇವರಿಗೆ ಈ ವಿಷಯ ಚೆನ್ನಾಗಿ ಗೊತ್ತಿರಬೇಕು.

ಶ್ರೀ ಎಸ್. ವೈ ಪಾಟೀಲ್.—ನಿಮಗೆ ಆ ವಿಷಯ ಎಷ್ಟು ಗೊತ್ತಿದೆಯೋ ನನಗೂ ಅಷ್ಟೇ ಗೊತ್ತಿದೆ.

ಶ್ರೀ ಎಸ್. ವೈ. ಪಾಟೀಲ್.—ನಿಮ್ಮ ಮನೆಯಲ್ಲಿ ಯಾರಿಗಾದರೂ ಹೆಣ್ಣು ಮಗುವಿಗೆ ಈ ರೀತಿಯಾಗಿ ಅನಾಹುತವಾಗಿದ್ದರೆ, ನೀವು ಸುಮ್ಮನೆ ಇರುತ್ತಿದ್ದಿರಾ?

SRI B. BASAVALINGAPPA.—Madam Speaker, I cannot understand why the hon. members are attaching so much importance to a thing which is supposed to have happened sometime ago. If any person was aggrieved, it was her duty to have lodged a complaint with the police.

ಶ್ರೀ ಎಸ್. ವೈ. ಪಾಟೀಲ್.—ಎಲ್ಲರೂ ಶಕ್ಯವಾದಷ್ಟು ಕನ್ನಡದಲ್ಲಿಯೇ ಮಾತನಾಡಬೇಕು. ಕರ್ನಾಟಕದಲ್ಲಿ ಹುಟ್ಟಿ ಕನ್ನಡದಲ್ಲಿ ಮಾತನಾಡುವುದಿಲ್ಲ

ವೆಂದರೆ ಹೇಗೆ ? ಯಾರಿಗೆ ಕನ್ನಡ ಬರುವುದಿಲ್ಲವೋ ಅವರು ಅನಿವಾರ್ಯವಾಗಿ ಇಂಗ್ಲಿಷ್‌ನಲ್ಲಿ ಮಾತನಾಡಿದರೆ ಪರವಾ ಇಲ್ಲ. ಕನ್ನಡ ತಿಳಿದವರು ಏಕೆ ಕನ್ನಡದಲ್ಲಿ ಮಾತನಾಡಬಾರದು ?

ಶ್ರೀ ಡಿ. ದೇವರಾಜ್ ಅರಸ್.—ಮಾತನಾಡಿದರೆ ಅದೇನೂ ರೂಲ್ಸ್‌ಗೆ ವಿರೋಧ ಅಲ್ಲ.

SRI B. BASAVALINGAPPA.—If any person is interested in that person, as per law under the Criminal procedure code, it was his duty to have lodged a complaint with the police. None of these friends have lodged a complaint so far. Those who are interested including Sri Vatal Nagaraj should have lodged a complaint in any of the police station as per law. Has anybody done so far? Now, some papers have published this incident for the purpose of propaganda. On the basis of press reports alone Sri Kittur was made to resign. The question arises how the hon. members can compel the Chief Minister or the Government to say what happened to Smt. Sumitra Desai. The Chief Minister has said that he is enquiring into this incident. Whether Smt. Sumitra Desai went to Sri Kuttur's house or not is a matter of conjecture and speculation. The C. B. I. has been entrusted with this matter and they have taken up the investigation. Let them go into it and throw some light. The fact remains that the Mysore police have not so far been successful in tracing this girl. What action should be taken against the police officers who have not been able to trace this girl so far is a matter which should be left to the Minister in charge of the portfolio. Under these circumstance, I cannot understand what makes my Learned Friends to raise this topic again and again, especially when the matter is being looked into by the Government. I would therefore request them not to depend upon conjectures and speculate on this incident. If there are any substantial points and facts, they can place them before the house and the house will take notice of them. Without placing facts, I do not think the house can take congnisance of such speculations and conjectures.

ಶ್ರೀ ಎಂ.ಎಸ್. ಕೃಷ್ಣನ್.—ಈಗ ಪ್ರಶ್ನೆ ಏನೆಂದರೆ, ಮಾನ್ಯ ಬಸವಲಿಂಗಪ್ಪನವರು ಎರಡು ಮೂರು ಪ್ರಶ್ನೆಗಳನ್ನು ಎತ್ತಿದ್ದಾರೆ. ಒಂದನೆಯದು ಏನೆಂದರೆ, ಯಾರಾದರೂ ಸಹ ಇದರ ಬಗ್ಗೆ ಕೋರ್ಟಿಗೆ ಆಗಲಿ ಅಥವಾ ಪೋಲೀಸ್ ಸ್ಟೇಶನಿಗಾಗಲಿ ಕಂಪ್ಲೈಂಟ್ ಕೊಡಬಹುದಾಗಿತ್ತು ಎಂದು ಹೇಳಿದರು. ನನಗನಿಸುತ್ತದೆ ಈಗ ಇದರ ಬಗ್ಗೆ ಕಂಪ್ಲೈಂಟ್ ಕೊಡುವ ಪ್ರಶ್ನೆ ಬರುವುದಿಲ್ಲ. ಈ ಪ್ರಶ್ನೆ ಇವತ್ತು ಬೀದಿ ಮಾತಾಗಿದೆ. ಅಲ್ಲದೆ ಇದರ ಪರಿಣಾಮವಾಗಿ ಒಬ್ಬ ಮಂತ್ರಿಯವರು ಸಹ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಈಗ ಅದರ ಬಗ್ಗೆ ದೂರು ಕೊಡಬೇಕೆಂದು ಹೇಳುವುದು ಸರಿಯಾದ ಮಾತಲ್ಲ. ಅದಲ್ಲದೆ ಅದನ್ನು ಸಾಬೀತು ಮಾಡಬೇಕಾದರೆ ಬೇರೆ ರೀತಿಯಲ್ಲಿ ಮಾಡೋಣ. ಇನ್ನೊಂದು ವಿಚಾರವೇನೆಂದರೆ, ಇದರ ಬಗ್ಗೆ ಐ. ಜಿ ಪಿ. ಯವರು ಒಂದು ರಿಪೋರ್ಟ್ ಕೊಟ್ಟಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ. ಅದನ್ನು ಮುಖ್ಯಮಂತ್ರಿಯವರು ಸಹ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದ್ದರಿಂದ ಆ ಐ.ಜಿ.ಪಿ. ಯವರ ರಿಪೋರ್ಟನ್ನು ಏಕೆ ಈ ಸಭೆಯ ಮುಂದೆ ಇಡಬಾರದು ? ಅದನ್ನು ಸಭೆಯ ಮುಂದಿಟ್ಟರೆ ಇದರಲ್ಲಿ ಯಾರು ತಪ್ಪಿತಸ್ಥರು ಎಂದು ಗೊತ್ತಾಗುತ್ತದೆ. ಅದನ್ನು ಇವರು ಏಕೆ ಮುಚ್ಚಿಟ್ಟುಕೊಳ್ಳಬೇಕು ? ಅದೇರೀತಿ ಮಾನ್ಯ ಕಿತ್ತೂರರವರು ಸಹ ಒಂದು ಸ್ಟೇಟ್‌ಮೆಂಟನ್ನು ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಅವರು ಸಹ ಈ ಅಪಾದನೆಯಿಂದ ನಿರಪರಾಧಿಯಾಗಿದ್ದರೆ ವಿಮುಕ್ತರಾಗಬೇಕು ಅದನ್ನು ಕಂಡು ಹಿಡಿಯಬೇಕಾದರೆ, ಐ.ಜಿ.ಪಿ. ಯವರ ವರದಿಯನ್ನು ಈ ಸಭೆಯ ಮುಂದೆ ಇಡಬೇಕು, ಪರಿಸ್ಥಿತಿ ಹೀಗೆ ಇರುವಾಗ ಇದರ ಬಗ್ಗೆ ಕೋರ್ಟಿನಲ್ಲಿ ಕೇಸ್ ಹಾಕಬೇಕು, ಮತ್ತು ಪೊಲೀಸ್ ಸ್ಟೇಷನಿನಲ್ಲಿ ದೂರು ಕೊಡಬೇಕೆಂದು ಹೇಳುವುದು ಸರಿಯಾದುದಲ್ಲ; ಮತ್ತು ಅದು ಇವತ್ತಿನ ಪರಿಸ್ಥಿತಿಗನುಗುಣವಾಗಿಲ್ಲ. ಎರಡನೆಯದು ಏನೆಂದರೆ, ಆ ವರದಿಯನ್ನು ಸಭೆಯ ಮುಂದಿಟ್ಟು ಚರ್ಚೆಗೆ ಅವಕಾಶ ಮಾಡಬೇಕಾಗಿದೆ. ಈ ವಿಚಾರದಲ್ಲಿರುವ ಸುಮಿತ್ರಾ ದೇಸಾಯಿಯು ಏನಾಗಿದ್ದಾರೆಂದು ಮೂರುವರೆ ತಿಂಗಳಿನಿಂದ ಗೊತ್ತಿಲ್ಲ. ಸುಮಿತ್ರಾ ದೇಸಾಯಿ ಬದುಕಿದ್ದಾರೆಯೋ ಅಥವಾ ಅವರನ್ನು ಕೊಲೆ ಮಾಡಿದ್ದಾರೆಯೋ ಎಂದು ಗೊತ್ತಿಲ್ಲ. ಪರಿಸ್ಥಿತಿ ಹೀಗಿರುವಾಗ ಸದಸ್ಯರು ಏಕೆ ಇದರಲ್ಲಿ ಆತುರತೆಯನ್ನು ತೋರಿಸುತ್ತಿದ್ದಾರೆಂದು ಕೇಳಿದರೇ ಹೇಗೆ? ಸರಕಾರದವರು ಸುಮಿತ್ರಾ ದೇಸಾಯಿಯವರನ್ನು ಜೀವಂತವಾಗಿ ಪ್ರೊಡ್ಯೂಸ್ ಮಾಡಬೇಕು ಇಲ್ಲವೇ ಅವರ ಮರ್ಡರ್ ಆಗಿದ್ದರೆ, ಮರ್ಡರ್ ಯಾರು ಮಾಡಿದ್ದಾರೆ ಅವರನ್ನು ಪತ್ತೆ ಮಾಡಬೇಕು. ಇದರಲ್ಲಿ ಅಪರಾಧಿ ಯಾರಿದ್ದಾರೆ ಅವರನ್ನು ಪತ್ತೆ ಮಾಡುವುದು ಪೋಲೀಸ್ ಇಲಾಖೆಯ ಕೆಲಸ. ಆದ್ದರಿಂದ ಇದು ಬಹಳ ಮುಖ್ಯವಾದ ವಿಷಯವಾಗಿರುವುದರಿಂದ ಅಲ್ಲದೆ ರಾಷ್ಟ್ರೀಯ ಪ್ರಶ್ನೆಯಾಗಿರುವುದರಿಂದ ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಎಸ್. ಬಂಗಾರಪ್ಪ (ಸೊರಬ) ಮಾನ್ಯ ಅಧ್ಯಕ್ಷರೆ, ರಾಜ್ಯಸರಕಾರದ ಪೋಲೀಸ್ ಖಾತೆಯು ಸುಮಿತ್ರ ದೇಸಾಯಿಯವರನ್ನು ಹುಡುಕಿ ಪತ್ತೆ ಹಚ್ಚುವ ಕಾರ್ಯದಲ್ಲಿ ಸಂಪೂರ್ಣವಾಗಿ ವಿಫಲರಾಗಿ ಇದನ್ನು ಸಿ ಬಿ ಐ ಗೆ ವಹಿಸಿ ಕೊಟ್ಟಿದ್ದಾರೆ. ಇವರು ಇದನ್ನು ಸಿ. ಬಿ. ಐ. ಗೆ ವಹಿಸಿ ಕೊಡುವ ಪ್ರಮೇಯ ವಾದರೂ ಏನು? ರಾಜ್ಯದಲ್ಲಿ ಇಂಥ ಅನೇಕ ಪ್ರಕರಣಗಳು ನಡೆದು ಅದನ್ನು ಪತ್ತೆ ಹಚ್ಚಲಿಲ್ಲವೇ? ಇದನ್ನು ಮಾತ್ರ ಸಿ.ಬಿ.ಐ. ಗೆ ವಹಿಸಿ ಕೊಡುವ ಪ್ರಮೇಯ ವೇನು ಎಂದು ಜನರು ಆಡಿಕೊಳ್ಳುತ್ತಿದ್ದಾರೆ. ಇವತ್ತು ಗೃಹ ಖಾತೆಯು ಮುಖ್ಯ ಮಂತ್ರಿಯವರ ಕೈಕೆಳಗೆ ಇದೆ. ಮುಖ್ಯ ಮಂತ್ರಿಯವರಿಗೆ ಶಕ್ತಿ ಇದ್ದರೆ, ಸುಮಿತ್ರ ದೇಸಾಯಿಯವರನ್ನು ಏಕೆ ಪತ್ತೆ ಹಚ್ಚಿಲ್ಲ? ಸುಮಿತ್ರ ದೇಸಾಯಿ ಕಣ್ಮರೆಯಾದ ಎರಡು ಮೂರು ದಿವಸಗಳಲ್ಲಿ ಈ ವಿಚಾರ ಇಲ್ಲಿ ಪ್ರಸ್ತಾಪಕ್ಕೆ ಬಂದಿದೆ. ಆದರೂ ಪೋಲೀಸ್ ಇಲಾಖೆಯವರು ಇವರನ್ನು ಪತ್ತೆ ಹಚ್ಚುವ ಕಾರ್ಯದಲ್ಲಿ ಯಶಸ್ವಿಯಾಗಲಿಲ್ಲ ಏಕೆ ಎಂದು ಕೇಳುತ್ತೇನೆ ಇದರಲ್ಲಿ ರಾಜ್ಯ ಸರಕಾರ ವಿಫಲ ರಾಗಿರುವುದರಿಂದ ದಯವಿಟ್ಟು ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಮುಖ್ಯಮಂತ್ರಿಯವರ ಪೋಲೀಸ್ ಇಲಾಖೆ ಇದರಲ್ಲಿ ನಿಸ್ಸಾಹಯಕ ರಾಗಿರುವುದರಿಂದ ಇದನ್ನು ಸಿ. ಬಿ. ಐ. ಗೆ ವಹಿಸಿ ಕೊಟ್ಟಿರುತ್ತಾರೆ. ಆದ್ದರಿಂದ ಮುಖ್ಯಮಂತ್ರಿಯವರು ರಾಜಿನಾಮೆಯನ್ನು ಕೊಡಬೇಕೆಂದು ನಾವು ಒತ್ತಾಯ ಮಾಡಬೇಕಾಗಿದೆ. ಅಲ್ಲದೆ ಈ ಮನೆಯಲ್ಲಿ ಈ ವಿಚಾರವನ್ನು ಸಿ. ಬಿ. ಐ. ಗೆ ವಹಿಸಿದ ಕಾರಣ, ಐ. ಜಿ. ಪಿ. ರಿಪೋರ್ಟು ಮತ್ತು ಇದಕ್ಕೆ ಸಂಬಂಧಪಟ್ಟ ಇತರ ವರದಿಗಳನ್ನು ಇಟ್ಟು ಇದರಲ್ಲಿ ಸಂಪೂರ್ಣವಾದ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಅಧ್ಯಕ್ಷರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ):—ಇದರಲ್ಲಿ ಏನಾಗಿದೆ ಎಂದರೆ ಅನೇಕ ಸಂಶಯಗಳು ಈ ಒಂದು ಪ್ರಕರಣದಿಂದ ಪ್ರಾರಂಭವಾಗಿದೆ. ಶ್ರೀಮಾನ್ ಕೃಷ್ಣನ್ ಅವರು ಹೇಳಿದ ಹಾಗೆ ಇದರಲ್ಲಿ ಶ್ರೀಮಾನ್ ಕಿತ್ತೂರ್ ಅವರು ಎಷ್ಟರ ಮಟ್ಟಿಗೆ ಜವಾಬ್ದಾರರಾಗಿದ್ದಾರೆ ಎನ್ನುವುದನ್ನು ನಾವು ಈ ಸದನದಲ್ಲಿ ಚರ್ಚೆ ಮಾಡಬೇಕಾಗಿದೆ ಏತಕ್ಕೆಂದರೆ ಶ್ರೀಮಾನ್ ಕಿತ್ತೂರ್ ಅವರು ಹಿಂದೆ ರಾಜ್ಯ ಸಚಿವರಾಗಿದ್ದರು. ಈಗಲೂ ಕೂಡ ಅವರು ಈ ಸದನದ ಸದಸ್ಯರಾಗಿದ್ದಾರೆ. ಅವರು ಈ ಬಗ್ಗೆ ಒಂದು ಹೇಳಿಕೆಯನ್ನು ಈ ಸದನದಲ್ಲಿ ಮಾಡುವುದಕ್ಕೆ ಅವಕಾಶ ವಾಗಿಲ್ಲ. ಕಾರಣವೇನೆಂದರೆ ಶ್ರೀಮಾನ್ ಕಿತ್ತೂರ್ ಅವರು ಮಂತ್ರಿ ಪದವಿಗೆ ರಾಜೀನಾಮೆಯನ್ನು ಕೊಟ್ಟು ನಂತರ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆ ಯನ್ನು ಕೊಟ್ಟು ಈ ಒಂದು ಪ್ರಸಂಗವನ್ನು ತನಿಖೆ ಮಾಡುತ್ತೇವೆ ಎಂದು ಆಶ್ವಾ ಸನೆಯನ್ನು ಕೊಟ್ಟಿದ್ದರು. ಈ ಬಗ್ಗೆ ಸರ್ಕಾರ ಹೆಚ್ಚು ಬೆಳಕು ಚೆಲ್ಲುವುದಕ್ಕೆ ಸಾಧ್ಯವಿದೆ ಎಂದು ನಾವು ಕಾತುರರಾಗಿದ್ದೆವು. ಆದರೆ ಅದು ಆಗಲಿಲ್ಲ. ಇದರ ಜೊತೆಗೆ ಇತ್ತೀಚೆಗೆ ತಿಳಿದಿರುವ ಹಾಗೆ ಇದರಲ್ಲಿ ಹಲವಾರು ವಿಚಾರಗಳು ಇವೆ.

(ಶ್ರೀ ಕಾಗೋಡು ತಿಮ್ಮಪ್ಪ)

ಅವುಗಳನ್ನು ಬಹಿರಂಗಪಡಿಸತಕ್ಕ ಅಗತ್ಯವಿಲ್ಲ. ಈ ವಿಷಯ ಇಲ್ಲಿ ಚರ್ಚೆಗೆ ಬಂದ ನಂತರ ಅವುಗಳನ್ನು ಬಹಿರಂಗ ಮಾಡಬಹುದು. ಪ್ರಮುಖವಾಗಿ ಇದರಲ್ಲಿ ಕೆಲವು ಉನ್ನತ ಪೋಲೀಸ್ ಅಧಿಕಾರಿಗಳು ಷರೀಕಾಗಿದ್ದಾರೆ ಎನ್ನುವುದು ಸರ್ವೇಸಾಧಾರಣವಾಗಿ ಎದ್ದು ಕಾಣುತ್ತದೆ. ಯಾರು ಯಾರು ಅಧಿಕಾರಿಗಳು ಮತ್ತು ಯಾವ ಯಾವ ರಾಜಕಾರಣಿಗಳು ಇದರಲ್ಲಿ ಆಸಕ್ತಿಯನ್ನು ವಹಿಸಿದ್ದಾರೆ ಎನ್ನುವುದನ್ನು ಈ ಸದನದಲ್ಲಿ ಚರ್ಚೆಗೆ ಬಂದಾಗ ಮಾತ್ರ ಹೇಳುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಈ ವಿಷಯ ಈ ಸದನದಲ್ಲಿ ಚರ್ಚೆಯಾಗಬೇಕು. ಇದರಲ್ಲಿ ಶ್ರೀಮಾನ್ ಕಿತ್ತೂರ್ ಅವರ ಗೌರವ ಪ್ರತಿಷ್ಠೆಗಳೂ ಅಡಕವಾಗಿವೆ. ಶ್ರೀಮಾನ್ ಬಸವಲಿಂಗಪ್ಪನವರು ಸರ್ಕಾರ ಇದನ್ನು ತನಿಖೆ ಮಾಡುವುದಕ್ಕೆ ಆಗದೇ ಇದ್ದುದರಿಂದ ಇದನ್ನು ಸಿ. ಬಿ. ಐ. ಗೆ ಕೊಟ್ಟಿದ್ದಾರೆ ಎಂದು ಹೇಳಿದರು. ಇದರಲ್ಲಿ ಯಾರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದರು, ಯಾರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲಿಲ್ಲ ಎನ್ನುವುದು ಇತ್ಯರ್ಥವಾಗಬೇಕು. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯನ್ನು ಕೊಡುವಾಗ ಶ್ರೀಮತಿ ಸುಮಿತ್ರಾ ದೇಸಾಯಿ ಅವರ ಚಲನವಲನವನ್ನು ನೋಡುತ್ತಾ ಇರಬೇಕು ಎಂದು ಗೃಹಶಾಖೆಯ ರಾಜ್ಯ ಸಚಿವರಾಗಿದ್ದ ಶ್ರೀಮಾನ್ ಕಿತ್ತೂರ್ ಅವರು ಪೋಲೀಸ್ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದರು ಎಂದು ಹೇಳಿದ್ದರು. ಅವರ ಸೂಚನೆಯ ಪ್ರಕಾರ ಪೋಲೀಸ್ ಅಧಿಕಾರಿಗಳು ಶ್ರೀಮತಿ ಸುಮಿತ್ರಾ ದೇಸಾಯಿ ಅವರ ಚಲನವಲನದ ಮೇಲೆ ಕಣ್ಣಿಟ್ಟು ಗಮನಿಸಿದ್ದರೆ ಇಲ್ಲಿಯವರೆಗೂ ಅದು ಒಂದು ದೊಡ್ಡ ಸಮಸ್ಯೆಯ ಪರಿಣಾಮವಾಗಿ ಆಗುತ್ತಾ ಇರಲಿಲ್ಲ. ಮಾನ್ಯ ಕಿತ್ತೂರ್ ಅವರು ಪೋಲೀಸ್ ಅಧಿಕಾರಿಗಳಿಗೆ ಏನು ಸೂಚನೆಯನ್ನು ಕೊಟ್ಟಿದ್ದರೂ ಅದನ್ನು ಅವರು ಪರಿಪಾಲನೆ ಮಾಡಿಲ್ಲ. ಈ ಪ್ರಕರಣ ಹೆಚ್ಚು ಬೆಳೆಯುವುದಕ್ಕೆ ಪೋಲೀಸ್ ಅಧಿಕಾರಿಗಳು ಕಾರಣರಾಗಿದ್ದಾರೆ. ಇದಕ್ಕೆ ಯಾರು ಹೊಣೆಗಾರರು ಎಂಬುದನ್ನು ಸರ್ಕಾರ ಯೋಚನೆ ಮಾಡಿಲ್ಲ. ಈ ವಿಷಯದಲ್ಲಿ ವಿಶೇಷವಾದ ತನಿಖೆ ನಡೆಯಲಿಲ್ಲ. ಶ್ರೀಮತಿ ಸುಮಿತ್ರಾ ದೇಸಾಯಿ ಅವರು ಬೀರೂರಿನಲ್ಲಿ ಕಂಡರು, ಅಲ್ಲಿ ಕಂಡು, ಇಲ್ಲಿ ಕಂಡರು ಎಂದು ಹೇಳಿ ಪೋಲೀಸಿನವರು ಅವರ ಫೋಟೋವನ್ನು ಬಿಡುಗಡೆ ಮಾಡಿದರು. ಆ ಮೇಲೆ ಅದನ್ನು ಮತ್ತೆ ವಾಪಸ್ಸು ಪಡೆದರು. ಈ ಸದನ ಮುಂದುವರಿದ ಮೇಲೆ ಈ ವಿಚಾರದಲ್ಲಿ ಪೋಲೀಸರ ಬಗ್ಗೆ ಸಂಶಯಕ್ಕೆ ಅವಕಾಶ ಮಾಡಿದೆ. ಸರ್ಕಾರದವರು ಈ ಒಂದು ವಿಚಾರವನ್ನು ತನಿಖೆ ಮಾಡಿ ಹೊಸ ವಿಷಯಗಳು ಬಂದಾಗ ಮಾನ್ಯ ಮುಖ್ಯ ಮಂತ್ರಿಗಳು ಪತ್ರಿಕೆಯಲ್ಲಿ ಬಹಿರಂಗವಾಗಿ ಹೇಳಿಕೆ ಕೊಟ್ಟಿದ್ದರೆ ಇದರಲ್ಲಿ ಹೆಚ್ಚು ಚರ್ಚೆ ಮಾಡುವುದಕ್ಕೆ ಅವಕಾಶವಾಗಲೀ ಅಗತ್ಯವಾಗಲೀ ಇರಲಿಲ್ಲ. ಪೋಲೀಸಿನವರು ಆಗಿಂದಾಗ್ಗೆ ಪತ್ರಿಕೆಗಳಲ್ಲಿ ಈ ವಿಷಯದಲ್ಲಿ ವರದಿಯನ್ನು ಕೊಡತಕ್ಕಂಥಾ ಮತ್ತು ಆ ಮಾತನ್ನು ವಾಪಸ್ಸು

ಪಡೆಯುವುದನ್ನು ಮಾಡಿದ್ದಾರೆ. ಪ್ರಮುಖವಾಗಿ ಕೆಲವು ಪೋಲೀಸ್ ಅಧಿಕಾರಿಗಳು ಇದರಲ್ಲಿ ಷರೀಕಾಗಿ ಕೆಲವು ಮಂತ್ರಿಗಳನ್ನು ಮಂತ್ರಿಪದವಿಯಿಂದ ತೆಗೆಯಬೇಕು ಎಂದು ಕೆಲವು ವಿಷಯಗಳನ್ನು ಮುಚ್ಚಿ ಹಾಕಿದ್ದಾರೆ. ಇದನ್ನು ಬೇಕಾದರೆ ನಾವು ಚರ್ಚೆಯಲ್ಲಿ ತೋರಿಸುತ್ತೇವೆ. ಇದನ್ನು ಕೇವಲ ಬರೀ ಮೈಸೂರು ರಾಜ್ಯದಲ್ಲೇ ಅಲ್ಲ ಇಡೀ ರಾಷ್ಟ್ರದಲ್ಲೇ ಪ್ರಮುಖ ಪತ್ರಿಕೆಗಳವರು ಅಗ್ರ ಲೇಖನಗಳನ್ನು ಬರೆದಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ಕೂಲಂಕಷವಾಗಿ ಚರ್ಚೆ ಮಾಡಿದರೆ ಇದರಲ್ಲಿ ಯಾರು ತಪ್ಪಿತಸ್ಥರು ಯಾರು ತಪ್ಪಿತಸ್ಥರಲ್ಲ ಎಂಬುದು ಈ ಸದನದಲ್ಲಿ ತೀರ್ಮಾನವಾಗುತ್ತದೆ. ಈ ದೃಷ್ಟಿಯಿಂದ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಮಾನ್ಯ ಅಧ್ಯಕ್ಷರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ :—ಈ ವಿಚಾರದಲ್ಲಿ ಮಾನ್ಯ ಸದಸ್ಯರು ಬಹಳ ವಿವರವಾಗಿ ಈಗಾಗಲೇ ಹೇಳಿದ್ದಾರೆ. ಈ ಪ್ರಕರಣದಲ್ಲಿ ಶ್ರೀಮಾನ್ ಕಿತ್ತೂರ್ ಅವರ ಜೊತೆಗೆ ಅನೇಕ ಸಹೋದ್ಯೋಗಿಗಳು ಭಾಗಸ್ಥರಿದ್ದಾರೆ ಎನ್ನುವ ಅಂಶ ಇದೆ. ಇದರಲ್ಲಿ ಕೋತಿ ಮೊಸರನ್ನವನ್ನು ತಿಂದು ಮೇಕೆ ಬಾಯಿಗೆ ಸವರಿದ ಹಾಗೆ ಶ್ರೀಮಾನ್ ಕಿತ್ತೂರ್ ಅವರು ಇದಕ್ಕೆ ಬಲಿಯಾಗಿದ್ದಾರೆ. ಅದರಿಂದಾಗಿ ಶ್ರೀಮಾನ್ ಕಿತ್ತೂರ್ ಅವರು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಈ ವಿಷಯ ಈ ಸದನದಲ್ಲಿ ಚರ್ಚೆಯಾದರೆ ಆಗ ಯಾರು ತಪ್ಪಿತಸ್ಥರು ಎಂಬುದು ಗೊತ್ತಾಗುತ್ತದೆ. ಈಗ ಬೀದಿ ಬೀದಿಯಲ್ಲಿಯೂ ಕೂಡ ಶ್ರೀಮತಿ ಸುಮಿತ್ರಾ ದೇಸಾಯಿ ಅವರ ಸಮಾಚಾರ ಏನಾಯಿತು ಎಂದು ಸಾಮಾನ್ಯ ಪ್ರಶ್ನೆಗಳು ಕೇಳುತ್ತಾರೆ. ಈ ವಿಷಯದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುವುದು ಪ್ರೆಸ್ಟೀಜ್ ಪ್ರಶ್ನೆ ಅಲ್ಲ. ಸದಸ್ಯರ ಒಂದು ಮಾನಾವಮಾನದ ಪ್ರಶ್ನೆ. ಆದ್ದರಿಂದ ಈ ವಿಷಯದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟು ನಿಜಾಂಶವನ್ನು ಹೊರಗೆಡಹಿದರೆ ಶ್ರೀಮತಿ ಸುಮಿತ್ರಾ ದೇಸಾಯಿ ಅವರು ಇದ್ದಾರೆಯೇ ಅಥವಾ ಇಲ್ಲವೇ, ಅವರನ್ನು ಪತ್ತೆ ಮಾಡುವ ಬಗ್ಗೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನುವ ಬಗ್ಗೆ ವಿಷಯವನ್ನು ತಿಳಿಯುವುದಕ್ಕೆ ಸಾಧ್ಯವಾಗುತ್ತದೆ. ಅದು ಬಿಟ್ಟು ವಿಷಯವನ್ನು ಬಚ್ಚಿಟ್ಟು ತಿಪ್ಪೆಸಾರಿಸುವ ಕೆಲಸ ಮಾಡಿದರೆ ಸರಿ ಹೋಗುವುದಿಲ್ಲ. ಈ ದೃಷ್ಟಿಯಿಂದ ಈ ವಿಷಯದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ಅಧ್ಯಕ್ಷರನ್ನು ಕೇಳಿಕೊಳ್ಳುತ್ತೇನೆ.

*ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ):— ಮಾನ್ಯ ಅಧ್ಯಕ್ಷಿಣಿಯವರೇ ಈ ಸುಮಿತ್ರಾ ದೇಸಾಯಿ ಅವರ ಪ್ರಕರಣದ ಬಗ್ಗೆ ಚರ್ಚೆ ಮಾಡುವುದಕ್ಕೆ ಏತಕ್ಕೆ ಅವಕಾಶ ಮಾಡಿಕೊಡಬೇಕು ಎಂದರೆ ಇದರಲ್ಲಿ ಕೆಲವು ಮಂತ್ರಿಗಳು ಒಳಗಾಗಿದ್ದಾರೆ ಎಂದು ನಾವು ವ

ಶ್ರೀ ಬಿ. ಪುಟ್ಟಸ್ವಾಮಯ್ಯ

ಹಿರಿಯ ಸದಸ್ಯರಾದ ಶ್ರೀಮಾನ್ ಕೆ. ಹನುಮಂತಯ್ಯನವರು ಈ ವಿಷಯವನ್ನು ಲೋಕ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಶ್ರೀಮತಿ ಸುಮಿತ್ರಾ ದೇಸಾಯಿ ಅವರು ಕಣ್ಮರೆಯಾಗಿರತಕ್ಕ ಒಂದು ಶಂಕೆ ಈ ಒಂದು ಪ್ರಕರಣ ಏನಿದೆ ಇದರಲ್ಲಿ ಮೈಸೂರು ರಾಜ್ಯದ ಕೆಲವು ಮಂತ್ರಿಗಳು ಒಳಗಾಗಿದ್ದಾರೆ ಎಂದು ಅವರು ಹೇಳಿದ್ದಾರೆ. ಇಂಥಾ ಅಪಾದನೆಗೆ ಒಳಗಾಗಿರತಕ್ಕ ಕೆಲವು ಮಂತ್ರಿಗಳು ಮೈಸೂರು ರಾಜ್ಯದ ಆಡಳಿತ ಸೂತ್ರವನ್ನು ವಹಿಸಿಕೊಂಡು ನಡೆಸುತ್ತಾ ಇರುವಾಗ ಈ ಮಾನ್ಯ ಸಭೆಯ ಸದಸ್ಯರಾಗಿ ನಾವು ಹೇಗೆ ಸುಮ್ಮನೆ ಹೇಗೆ ಕುಳಿತುಕೊಳ್ಳುವುದು ? ಈ ಪಾಪಾಗ್ನಿಯಲ್ಲಿ ಒಳಗಾಗಿರುವವರು ಯಾರು ಯಾರು ಇದ್ದಾರೆ ಎನ್ನತಕ್ಕಂಥಾದ್ದು ಈ ರಾಜ್ಯಕ್ಕೆ ಮಾತ್ರವಲ್ಲ, ಈ ರಾಷ್ಟ್ರಕ್ಕೂ ಗೊತ್ತಾಗಬೇಕು. ಮೈಸೂರು ರಾಜ್ಯದ ನ್ಯಾಯ, ಧರ್ಮ, ಘನತೆ, ಗೌರವ ಮತ್ತು ಹಿರಿಮೆ ಉಳಿಯಬೇಕಾದರೆ ಈ ವಿಷಯ ಈ ಸದನದಲ್ಲಿ ಬಿಚ್ಚು ಮನಸ್ಸಿನಿಂದ ಚರ್ಚೆಯಾಗಬೇಕು. ಈ ಅಮೃತ ಕೊಳದಲ್ಲಿ ಏನೇನು ಮುಖ್ಯ ಅಂಶಗಳು ಇವೆ ಎಂಬುದನ್ನು ಕೇಳಬೇಕು ಎನ್ನುವ ಕಾತುರತೆ ಇದೆ. ಈ ಸುಮಿತ್ರಾ ದೇಸಾಯಿ ಅವರ ಪತೆಯ ತರದೂದಿನಲ್ಲಿ ಪೋಲೀಸ್ ಅಧಿಕಾರಿಗಳು ವಿಫಲರಾಗಿದ್ದಾರೆ. ಈ ಪ್ರಕರಣದಲ್ಲಿ ಒಳಗಾಗಿದ್ದವರನ್ನು ಪತ್ತೆ ಮಾಡಲು ಪೋಲೀಸ್ ನಾಯಿಗಳು ಹುಡುಕಿಕೊಂಡು ಹೋದಾಗ ಈ ಪೋಲೀಸ್ ನಾಯಿಗಳು ಕೆಲವು ಮಂತ್ರಿಗಳನ್ನು ನೆಕ್ಕಿದವು. ಇದು ರಾಷ್ಟ್ರಕ್ಕೆ ಗೊತ್ತಾಗಬೇಕು. ಇದನ್ನು ಪತ್ತೆ ಮಾಡುವುದಕ್ಕೆ ಎಷ್ಟು ಜನ ಪೋಲೀಸ್ ಅಧಿಕಾರಿಗಳನ್ನು ಬಿಟ್ಟಿದ್ದರು, ಈ ಪ್ರಕರಣವನ್ನು ಪತ್ತೆ ಮಾಡುವುದಕ್ಕೆ ಎಷ್ಟು ಪೋಲೀಸ್ ನಾಯಿಗಳನ್ನು ಬಿಟ್ಟಿದ್ದರು ಇವುಗಳೆಲ್ಲವನ್ನೂ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಗೆ ತಿಳಿಸಬೇಕು ಕೆಲವು ಮಂತ್ರಿಗಳು ಈ ಪ್ರಕರಣದಲ್ಲಿ ಒಳಗಾಗಿದ್ದಾರೆ ಎಂದು ನಿಮ್ಮ ಕಾಂಗ್ರೆಸ್ ಪಕ್ಷದ ಹಿರಿಯ ಸದಸ್ಯರಾದ ಶ್ರೀಮಾನ್ ಕೆ. ಹನುಮಂತಯ್ಯನವರು ಲೋಕಸಭೆಯಲ್ಲಿ ಹೇಳಿದ್ದಾರೆ. ಅವರ ಹೇಳಿಕೆಯನ್ನು ಪ್ರತಿಭಟನೆ ಮಾಡಿ ಯಾವ ಮಂತ್ರಿಗಳೂ ಹೇಳಿಲ್ಲ. ಆದ್ದರಿಂದ ಶ್ರೀಮಾನ್ ಕೆ. ಹನುಮಂತಯ್ಯನವರು ಹೇಳಿದ್ದರಲ್ಲಿ ಸತ್ಯ ಇದೆ ಎಂಬ ಅಂಶ ಭಾಸವಾಗುತ್ತದೆ. ಈ ಮನೆಯ ಗೌರವ ಮತ್ತು ಈ ಮನೆಯ ಸದಸ್ಯರ ಮಾನ ಮರ್ಯಾದೆ ಬೆಳೆಯಬೇಕು, ಉಳಿಯಬೇಕು ಎಂಬ ಅಂಶ ಇದ್ದರೆ ಈ ಪ್ರಕರಣದ ವಿಷಯದಲ್ಲಿ ತೀವ್ರವಾಗಿ ಚರ್ಚೆ ಮಾಡುವುದಕ್ಕೆ ತಾವು ಸಮ್ಮತಿ ಕೊಡಬೇಕು. ಈ ವಿಷಯದಲ್ಲಿ ಬಿಚ್ಚು ಮನಸ್ಸಿನ ಪ್ರಸ್ತಾಪ ಅತ್ಯವಶ್ಯಕವಾಗಿದೆ. ಆದ್ದರಿಂದ ಇದರ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

2-30 P.M.

ಶ್ರೀ ಎಸ್. ವೈ. ಪಾಟೀಲ್ : (ಸಿಂದಗಿ) ಮಾನ್ಯ ಸಭಾಧ್ಯಕ್ಷಿಣಿಯವರೇ, ಕೇವಲ ಸರ್ಕಾರವನ್ನು ಟೀಕೆ ಮಾಡಬೇಕೆಂಬ ಉದ್ದೇಶದಿಂದ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ನಾವು ಕೇಳುತ್ತಿಲ್ಲ. ಆಕೆ ಇಂದು ಸತ್ತಿದ್ದಾಳೆಯೋ ಅಥವಾ ಬದುಕಿದ್ದಾಳೆಯೋ ಎಂಬುದು ಪ್ರಶ್ನೆ. ಆಕೆ ಬೆಂಗಳೂರಿಗೆ ಬಂದು ಮಾನ್ಯ ಕಿತ್ತೂರ ಅವರ ಮನೆಗೆ ಹೋದಳು. ನಂತರ ಅಲ್ಲಿಂದ ಯಾವುದೋ ಆಶ್ರಮಕ್ಕೆ ಹೋದಳು. ಅಲ್ಲಿಂದ ಮತ್ತೆಲ್ಲಿಗೆ ಹೋಗಿದ್ದಾಳೆಂಬುದು ಯಾರಿಗೂ ಗೊತ್ತಿಲ್ಲ. ಕರ್ನಾಟಕ ರಾಜ್ಯದಲ್ಲಿ ಸರ್ವೇಸಾಮಾನ್ಯವಾಗಿ ಎಲ್ಲರ ಬಾಯಲ್ಲಿಯೂ ಸಹ ಇದೇ ಮಾತು ಕೇಳಿ ಬರುತ್ತಿದೆ ಇದರಿಂದ ಕರ್ನಾಟಕ ರಾಜ್ಯಕ್ಕೇ ಅಪಮಾನ ಎಂದು ಹೇಳುತ್ತೇನೆ. ಈ ಸರ್ಕಾರ ನಮ್ಮದು, ಈ ಮಂತ್ರಿ ಮಂಡಲ ನಮ್ಮದು, ಆದಕಾರಣ ಸರ್ಕಾರ ಮತ್ತು ಮಂತ್ರಿಮಂಡಲದ ಗೌರವ ಹೋದರೆ ನಮ್ಮ ಗೌರವವೂ ಸಹ ಹೋದಂತೆ ಆದಕಾರಣ ನಾನು ತಮ್ಮಲ್ಲಿ ಹಾಗೂ ಸರ್ಕಾರದವರಲ್ಲಿ ಅತಿ ನಮ್ರತೆಯಿಂದ ಪ್ರಾರ್ಥನೆ ಮಾಡಿಕೊಳ್ಳು ವುದೇನೆಂದರೆ, ಆಕೆ ಎಲ್ಲಿದ್ದಾಳೆಂಬುದನ್ನು ಪತ್ತೆ ಹಚ್ಚಬೇಕು. ಇಂತಹ ಒಂದು ಸಣ್ಣ ಕೇಸನ್ನು ತಪಾಸು ಮಾಡಲು ಇಷ್ಟೊಂದು ಸಮಯ ಬೇಕೇ ಎಂದು ನಾನು ಕೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಹೃದಯ ದೊಡ್ಡದು. ಮಾನ್ಯ ಕಿತ್ತೂರ ಅವರು ನಿರಪರಾಧಿಗಳು ಎಂದು ಮಾತನಾಡುವುದು ಸರಿಯಲ್ಲ. ಆ ರೀತಿ ಹೇಳುವುದರಿಂದ ಅಪರಾಧ ಸಿದ್ಧವಾಗುವುದಿಲ್ಲ. ಮೊದಲು ತಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಆಗ ಅಪರಾಧಿಗಳು ಯಾರೂ ಎಂಬುದು ತಿಳಿಯು ತ್ತದೆ ಚರ್ಚೆಯ ನಂತರ ಅಪರಾಧಿಗಳು ಯಾರು ಎಂದು ಗೊತ್ತಾಗುತ್ತದೋ, ಅವರಿಗೆ ಶಿಕ್ಷೆಯಾಗಲಿ. ಈ ಕಳಂಕದಿಂದ ನಮ್ಮ ನಾಡಿನಲ್ಲಿಯೇ ಏಕೆ, ಇಡೀ ಭಾರತದೇಶದಲ್ಲಿಯೇ ನಮಗೆ ಮೋರೆ ತೋರಿಸಲಾರದ ಪರಿಸ್ಥಿತಿ ಬಂದಿದೆ. ಆದಕಾರಣ ಈ ಕಳಂಕ ನಿವಾರಣೆಯಾಗಬೇಕಾಗಿದೆ. ನಮ್ಮ ರಾಜ್ಯ ಘಟನೆಯಲ್ಲಿ ಪ್ರತಿಯೊಬ್ಬರಿಗೂ ಪ್ರಾಣದ ರಕ್ಷಣೆ ಕೊಡಬೇಕೆಂದು ಹೇಳಿದೆ. ಆದರೆ ಇಂದು ಒಬ್ಬ ಕುಲೀನ ಹೆಣ್ಣು ಮಗಳು ಜೀವ ಸಹಿತ ಇದ್ದಾಳೆಯೋ ಅಥವಾ ಇಲ್ಲವೇ ಎಂದು ಧೈರ್ಯವಾಗಿ ಹೇಳುವುದಕ್ಕೆ ನಿಮಗೆ ಸಾಧ್ಯವಿಲ್ಲವಾಗಿದೆ. ನಿಮಗೆ ಈ ವಿಚಾರದಲ್ಲಿ ಏನು ಅನಿಸುತ್ತದೋ ನನಗೆ ಗೊತ್ತಿಲ್ಲ, ಆದರೆ ನಮಗೆ ಮಾತ್ರ ಆಕೆಯ ವಿಚಾರದಲ್ಲಿ ದುಃಖವಾಗಿದೆ. ಆಕೆಯ ಬಗ್ಗೆ ಏನು ಸಂಶಯ ನಮಗೆ ಬಂದಿದೆ ಅದು ಹೋಗಬೇಕಾದರೆ, ಆಕೆಯೇ ಬಂದು ಈ ಪ್ರಕರಣದಲ್ಲಿ ಯಾರು ಯಾರು ಒಳಗೊಂಡಿದ್ದಾರೆ, ಯಾರು ಯಾರು ಇಲ್ಲಿ ಎಂಬುದನ್ನು ಹೇಳಬೇಕು, ಮತ್ತು ಇದರ ಬಗ್ಗೆ ಪೂರ್ಣವಾದ ಚರ್ಚೆ ಮಾಡಲು ಅವಕಾಶ ಮಾಡಿಕೊಡ ಬೇಕೆಂದು ನಮ್ರತೆಯಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : (ವೇಮಗಲ್) ಮೊನ್ನೆ ಗುಲ್ಬರ್ಗದಲ್ಲಿ ವಿದ್ಯಾರ್ಥಿಗಳು ಫೀ ವಿಚಾರದಲ್ಲಿ ಸ್ಟ್ರೈಕು ಮಾಡಿದಾಗ ಪೋಲೀಸಿನವರು ವಿದ್ಯಾರ್ಥಿಗಳಿಗೆ ಹೊಡೆದರು. ಅವರ ಮನೆಗಳಿಗೆ ಮತ್ತು ರೂಮುಗಳಿಗೆ ಹೋಗಿ ಹೊಡೆದರು. ಈ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದಾಗ ಅವರು ಕಾನೂನು ಭಂಗ ಮಾಡಿದವರು ಯಾರೇ ಆಗಿರಲಿ, ಅವರು ಎಲ್ಲಿಯೇ ಇರಲಿ, ಅವರನ್ನು ಶಿಕ್ಷಿಸುತ್ತೇವೆಂದು ಹೇಳಿದರು. ಲಾ-ಅಂಡ್ ಆರ್ಡರ ಎಲ್ಲರಿಗೂ ಅನ್ವಯುವಾಗುತ್ತದೆಂದು ಹೇಳುವಾಗ, ನಮ್ಮ ರಾಜ್ಯದಲ್ಲಿ ಒಬ್ಬ ಮಹಿಳೆ ಪತ್ತೆಯಿಲ್ಲ ಎಂದರೆ, ಇದೂ ಸಹ ಲಾ-ಅಂಡ ಆರ್ಡರು ಪ್ರಾಬ್ಲಮ್ ಆಗುವುದಿಲ್ಲವೇ ಎಂದು ಕೇಳುತ್ತೇನೆ. ಒಬ್ಬ ಮಹಿಳೆಯನ್ನು ಪತ್ತೆ ಹಚ್ಚುವುದರಲ್ಲಿ ಸರ್ಕಾರದವರು ವಿಫಲವಾಗಿದ್ದಾರೆಂದು ಕಂಡು ಬಂದಾಗ, ಸರ್ಕಾರದ ಅಸ್ತಿತ್ವಕ್ಕೆ ಧಕ್ಕೆ ಬಂದಂತೆ ಆಗುವುದಿಲ್ಲವೇ? ಈ ಎಲ್ಲ ಕಾರಣಗಳಿಂದ ಇದರ ಬಗ್ಗೆ ಪೂರ್ಣವಾದ ಚರ್ಚೆಗೆ ತಾವು ಅವಕಾಶ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗಾಗಲೇ 80 ಪರ್ಸೆಂಟ್‌ವರೆಗೆ ಚರ್ಚೆಯಾಗಿ ಹೋಯಿತು

ಶ್ರೀ ಡಿ. ದೇವರಾಜ ಅರಸ್ : (ಮುಖ್ಯ ಮಂತ್ರಿಗಳು) : ಇಲ್ಲಿಯು ವರೆಗೆ ಮಾನ್ಯ ವಿರೋಧ ಪಕ್ಷದ ಸದಸ್ಯರು ಮಾತನಾಡಿದ್ದನ್ನು ಕೇಳಿದ್ದೇನೆ. ಎಲ್ಲರ ಮಾತಿನಲ್ಲಿಯೂ ಎದ್ದು ಕಾಣುವುದೇನೆಂದರೆ, ಶ್ರೀಮಾನ್ ಕಿತ್ತೂರ ಅವರ ಬಗ್ಗೆ ಎಲ್ಲಾ ಸದಸ್ಯರಿಗೂ ಬಹಳ ಪ್ರೀತಿಯಿದೆ, ಅನುಕಂಪವಿದೆ ಎಂಬುದನ್ನು ತೋರಿಸುತ್ತಿದ್ದಾರೆ. ಅಷ್ಟೊಂದು ಅನುಕಂಪವಿರುವುದಕ್ಕಾಗಿ ನನ್ನ ಧನ್ಯವಾದಗಳು. ಆದರೆ ನಿಮ್ಮ ಒಂದು ಅನುಕಂಪ ಬಹಳ ಅತಿರೇಕಕ್ಕೆ ಹೋಗುತ್ತಿದೆ. ನಾನು ಒಂದು ಕಡೆ ಓದಿದ್ದು ಜ್ಞಾಪಕಕ್ಕೆ ಬರುತ್ತದೆ. ಮನುಷ್ಯನನ್ನು ಕೊಲ್ಲುವುದು ಎರಡು ತರಹ. ಒಂದು ಕತ್ತಿಯಿಂದ ಕೊಲ್ಲುವುದು, ಇನ್ನೊಂದು ಬಹಳ ಪ್ರೀತಿಯಿಂದ ಕೊಲ್ಲುವುದು. They are killing kindness or love or affection which they are exhibiting so much.

Sri M. S. Krishnan.—You have already killed him· Where is the question of our killing him?

Sri D. Devaraja Urs.—You are trying to beat a dead horse. If he is already killed, you are trying to kill the dead body. Is is not? You are trying to take out the dead body from the grave and making a ghost of it.

SRI S. BANGARAPPA.—We cannot kill a dead body. We can only kill a living person.

ಶ್ರೀ ಡಿ. ದೇವರಾಜ ಅರಸ್: ಎರಡನೆಯದು ಏನೆಂದರೆ, ನಮ್ಮ ಕರ್ನಾಟಕ ರಾಜ್ಯಕ್ಕೆ ಕಳಂಕ ತಂದಿರುವುದನ್ನು ಅಳಿಸುವುದಕ್ಕೆ ಕಾತುರರಾಗಿದ್ದಾರೆಂದು ಮಾನ್ಯ ಸದಸ್ಯರುಗಳು ಇಲ್ಲಿಯುವರೆಗೆ ಮಾತನಾಡಿದ್ದರಲ್ಲಿ ತಿಳಿದು ಬಂತು. ಇಷ್ಟೊಂದು ಕಾತುರವನ್ನು ತೋರಿಸುತ್ತಿರುವ ಮಾನ್ಯ ಸದಸ್ಯರಲ್ಲಿ ನನ್ನ ಒಂದು ಚಿಕ್ಕ ಮನವಿ ಏನೆಂದರೆ, ಅದೇ ಕಾತುರವನ್ನು ಕೃತಿಯಲ್ಲಿ ತೋರಿಸಿ ಎಂದು ನನ್ನ ವಿನಂತಿ. ಮತ್ತು ಈ ಬಗ್ಗೆ ಮಾನ್ಯ ಸದಸ್ಯರಲ್ಲಿ ಇಷ್ಟೊಂದು ಕಳಕಳಿ ಇದ್ದ ಮೇಲೆ ಇದರ ವಿಚಾರವನ್ನು ಸ್ವಲ್ಪ ಗಂಭೀರವಾಗಿ ಪ್ರಸ್ತಾಪ ಮಾಡುವುದು ಯುಕ್ತ. ಆ ಹೆಣ್ಣು ಮಗಳ ಮೇಲೆ ಬಹಳವಾದಂಥ ಗೌರವ ವಾತ್ಸಲ್ಯ ಮಾನ್ಯ ಸದಸ್ಯರಿಗೆ ಇದ್ದಂತೆ ಕಾಣುತ್ತವೆ. ಅಷ್ಟೊಂದು ವಾತ್ಸಲ್ಯ ಮತ್ತು ಗೌರವ ಆ ಹೆಣ್ಣು ಮಗಳ ಮೇಲೆ ಇದ್ದರೆ, ಈ ಪ್ರಶ್ನೆಯನ್ನು ನೋಡುವ ದೃಷ್ಟಿಯೂ ಕೂಡ ಬಹಳ ಗಂಭೀರವಾಗಿ ಇರಬೇಕಾದುದು ಅವಶ್ಯಕ. ನೀವೆಲ್ಲಾ ಮಾತನಾಡುವ ಧಾಟಿಯನ್ನು ನಾನು ನೋಡಿದೆ. ಇದೇ ರೀತಿ ನಮ್ಮ ಮನೆಯ ಮಕ್ಕಳ ವಿಚಾರ ದಲ್ಲಿಯೂ ಮಾತನಾಡಿದರೆ ಅವರಿಗೆ ಏನು ನೋವಾಗುತ್ತಿತ್ತು ಎಂಬುದನ್ನು ಗಮನದಲ್ಲಿಟ್ಟುಕೊಂಡು ಇನ್ನೊಬ್ಬ ವ್ಯಕ್ತಿಯ ಬಗ್ಗೆ ಮಾತನಾಡುವಾಗಲೂ ಸಹ ಅದೇ ರೀತಿ ನೋವಾಗುತದೆಂದು ತಿಳಿದುಕೊಂಡು ಮಾತನಾಡುವುದು ಯುಕ್ತ. ಆಕೆ ಇಂದು ಎಲ್ಲಿದ್ದಾರೆಂಬುದು ಯಾರಿಗೂ ಗೊತ್ತಿಲ್ಲ. ಇದರ ವಿಚಾರದಲ್ಲಿ ನಾನು ಹೋದ ಅಸೆಂಬ್ಲಿ ಅಧಿವೇಶನದಲ್ಲಿ ಒಂದು ಹೇಳಿಕೆಯನ್ನು ಈ ಸಭೆಯ ಮುಂದೆ ಇಟ್ಟಿದ್ದೆ.

ತದನಂತರ ಈ ಮಧ್ಯದಲ್ಲಿ ನಮ್ಮ ಸರಕಾರದ ವತಿಯಿಂದ ಹಾಗೂ ಪೋಲೀಸು ಇಲಾಖೆಯ ವತಿಯಿಂದ ಇವರನ್ನು ಪತ್ತೆ ಹಚ್ಚುವುದಕ್ಕೆ ಪ್ರಯತ್ನಗಳಾದವು ಮತ್ತು ಬೇರೆ ಪ್ರಯತ್ನಗಳೂ ನಡೆಯಿತು. ಈಗ ಅವರು ಪತ್ತೆ ಇಲ್ಲದ ಕಾರಣ ದಿಂದಲೇನೇ ನಾವು ಅಪರಾಧಿಗಳೋ ಏನೋ ಎನ್ನುವಂತೆ ಇದರ ಬಗ್ಗೆ ಬರೀ ಊಹಾಪೋಹಗಳನ್ನು ಇಟ್ಟುಕೊಂಡು ಇಲ್ಲಿ ಹೇಳುವುದು ಕಷ್ಟವೇ. ನೇರವಾದ ಯಾವ ವಿಚಾರಗಳೂ ಇದರಲಿಲ್ಲ. ಇದರಲ್ಲೇನೂ ಮರೆ ಮಾಚುವುದಕ್ಕಾಗಿ ಹಾಗೂ ಕರ್ಣಾಟಕ ರಾಜ್ಯಕ್ಕೆ ಕಳಂಕ ತರುವ ರೀತಿಯಲ್ಲಿ ಸರಕಾರ ಮಾಡುತ್ತಿದೆ. ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇಂತಹ ಒಂದು ವಿಚಾರದಲ್ಲಿ ಸಭೆಯ ಮುಂದೆ ಹೇಳುವಾಗ ಸಷ್ಟವಾಗಿ ಹೇಳಬೇಕಾಗುತ್ತದೆ. ಯಾವ ರಾಜ್ಯದಲ್ಲೂ ಇಂತಹ ಕಳಂಕ ಬಂದಿರಲಿಲ್ಲ ಎಂದು ಹಾಗೂ ನಮ್ಮ ದೇಶಕ್ಕೆ ಕಳಂಕ ಬರುತ್ತದೆ ಎಂದು....

ಶ್ರೀ ಎಸ್. ವೈ. ಪಾಟೀಲ್ : ಕಳಂಕ ಬರದೇ ಇನ್ನೇನಾಗುತ್ತ ದೆ?

ಶ್ರೀ ಡಿ. ದೇವರಾಜ ಅರಸ್: ಇದರ ಬಗ್ಗೆ ಇನ್ನೂ ತನಿಖೆ ಮಾಡಬೇಕೆನ್ನುವ ವಿಚಾರ ಇರುವಾಗ ಇದರಲ್ಲಿ ಕಳಂಕವೇನು ಬರುತ್ತದೆ?

ಶ್ರೀ ಕೆ. ಹೆಚ್. ಹನುಮೇಗೌಡ: ರಾಜ್ಯದ ಪೋಲೀಸು ಇಲಾಖೆಯವರ ವಶಕ್ಕೆ ಇವರನ್ನು ಒಪ್ಪಿಸಿರಲಿಲ್ಲವೇ ಮತ್ತು ಇದೇ ಇಲಾಖೆಯವರು ಜೀಪಿನಲ್ಲಿ ಇವರನ್ನು ಪೋರ್ಸಿಬಲ್ ಆಗಿ ಕಳುಹಿಸಿರಲಿಲ್ಲವೇ?

ಶ್ರೀ ಡಿ. ದೇವರಾಜ ಅರಸ್: ಅವರನ್ನು ಪೋಲೀಸರ ವಶಕ್ಕೆ ಕೊಡಲು ಅವರೇನೂ ಕಳ್ಳರಲಿಲ್ಲ. ತಾವೇನಾದರೂ ಅವರ ಪರ ಲಾಯರಾದರೆ ಆಗ ಅವರ ಬಗ್ಗೆ ತಾವು ವಕಾಲತ್ತು ವಹಿಸಬಹುದು. ಅವರನ್ನು ಏಕೆ ಕಳುಹಿಸಿದರು ಎನ್ನುವುದನ್ನೆಲ್ಲಾ ಅಲ್ಲಿ ಹೇಳಬಹುದ. ನಿಮಗೆ ಪ್ರಪಂಚವೇ ಭೂತಾಕಾರವಾಗಿ ಕಾಣುತ್ತದೆ. ಇದಕ್ಕಾಗಿ ಸರಕಾರ ಇದರಲ್ಲಿ ದೊಡ್ಡ ತಪ್ಪು ಮಾಡಿದೆಯೇನೋ ಎನ್ನುವಂತೆ ಕಾಣಿಸುತ್ತದೆ ಎಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಭೂತಕಾರವಾಗಿತ್ತೋ ಇಲ್ಲವೋ ಅದು ನಮಗೆ ಗೊತ್ತಿಲ್ಲ. ಪತ್ತೆ ಹಚ್ಚಲು ಇನ್ನೂ ಆಗಲಿಲ್ಲ. ಇದರಿಂದ ಕರ್ಣಾಟಕ ರಾಜ್ಯದವರೇ ಅಲ್ಲದ ಒಬ್ಬ ಹೆಣ್ಣು ಮಗಳು ಎಂದಾದರೂ ಬೇರೆ ರಾಜ್ಯದಿಂದ ನಮ್ಮ ರಾಜ್ಯಕ್ಕೆ ಬಂದರೆ ನಮ್ಮ ಸರಕಾರಕ್ಕೆ ಕಳಂಕವಲ್ಲದೆ ಬೇರೇನಾಗುತ್ತದೆ? ಇದನ್ನು ಅವರೇ ಹೇಳಬೇಕು.

ಶ್ರೀ ಡಿ. ದೇವರಾಜ ಅರಸ್: ನಮ್ಮ ರಾಜ್ಯಕ್ಕೇನೂ ಕಳಂಕ ಇಲ್ಲ. ಆದರೆ ನಿಮ್ಮ ದೃಷ್ಟಿಯಲ್ಲಿ ಕಳಂಕವಾಗುತ್ತದೆ. ಬೇರೆಯವರ ದೃಷ್ಟಿ ಒಂದು ರೀತಿ ಇರುತ್ತೆ.

ಶ್ರೀ ವಾಟಾಳ್ ನಾಗರಾಜ್: ನಿಮ್ಮ ದೃಷ್ಟಿ ಸರಿಯಲ್ಲ. ನಿಮ್ಮ ಮನಸ್ಸಿನಲ್ಲಿ ಏನಿದೆ ಅದು ಇಡೀ ದೇಶಕ್ಕೆ ಗೊತ್ತಾಗಬೇಕು.

ಶ್ರೀ ಡಿ. ದೇವರಾಜ ಅರಸ್: ನಮ್ಮ ದೃಷ್ಟಿ ಸರಿಯಲ್ಲ ಎನ್ನುತ್ತಾರೆ. ಆದರೆ ಅದನ್ನು ನಾವು ಒಪ್ಪಲು ತಯಾರಿಲ್ಲ. ನೀವು ಹರಿಕಥೆ ಏನು ಮಾಡುತ್ತೀರಿ ಅದನ್ನು ಕೇಳಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ನಾವೇನೂ ಇಲ್ಲಿ ಹರಿಕಥೆ ಮಾಡುತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್: ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿರುವುದು ನೋಡಿ ನಮಗೆ ಬಹಳ ಖೇದವುಂಟಾಗುತ್ತದೆ.

SRI S. BANGARAPPA : I request you to consider this aspect. The Chief Minister has made a definite allegation "ಕಾಣಿಸುತ್ತದೆ". It is a serious allegation. ನಮಗೂ ಮುಖ್ಯ ಮಂತ್ರಿಗಳ ವಿರಾಡ್ರೂಪ ಏನು ಎನ್ನುವುದು ಗೊತ್ತಾಗಿದೆ.

ಶ್ರೀ ಡಿ. ದೇವರಾಜ ಅರಸ್ : ನೀವು ಹೇಳುವುದನ್ನೆಲ್ಲಾ ಹೇಳಿದ್ದೀರಿ. ನಾನು ಹೇಳುವುದನ್ನೂ ತಾವು ಸ್ವಲ್ಪ ಸಾವಧಾನದಿಂದ ಕೇಳಬೇಕು.

ಶ್ರೀ ಎಸ್. ಬಂಗಾರಪ್ಪ : ನಾನೇನೂ ಇವರಂತೆ ಹೋಂ ಪೋರ್ಟ್‌ಫೋಲಿಯೋ ಇಟ್ಟುಕೊಂಡಿರುವ ಮಂತ್ರಿಯಲ್ಲ.

ಶ್ರೀ ಡಿ. ದೇವರಾಜ ಅರಸ್ : ನಿಮಗೇನೂ ಸದ್ಯಕ್ಕೆ ಹೋಂ ಪೋರ್ಟ್‌ಫೋಲಿಯೋ ಸಿಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ : ನಾನೇನಾದರೂ ಮುಖ್ಯ ಮಂತ್ರಿಯಾಗಿದ್ದರೆ ಇದರಲ್ಲಿ ಒಳಗಾಗಿರುವ ಎಷ್ಟೋ ಜನರನ್ನು ಮನೆಗೆ ಕಳುಹಿಸುತ್ತಿದ್ದೆ.

ಶ್ರೀ ಡಿ. ದೇವರಾಜ ಅರಸ್ : ಪ್ರಜಾಪ್ರಭುತ್ವದಲ್ಲಿ ನಿಮಗೂ ಮಂತ್ರಿಗಳಾಗುವುದಕ್ಕೆ ಅವಕಾಶ ಸಿಗುತ್ತದೆ. ಆಗ ತಾವು ಮಾತನಾಡಬಹುದು.

ಶ್ರೀ ಬಿ. ಪುಟ್ಟುಸ್ವಾಮಯ್ಯ : ಏನೋ ಶ್ರೀ ವಾಟಾಳ್ ನಾಗರಾಜರವರಿಗೆ ಆಸೆ ಇರುವ ಹಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಸಂಸ್ಥಾ ಕಾಂಗ್ರೆಸ್ಸಿನವರು ಸೇರುವಂತೆ ಸೇರಲು ನನಗೆ ಯಾವ ಆಸೆಯೂ ಇಲ್ಲ.

ಅಧ್ಯಕ್ಷರು : ಸದಸ್ಯರು ಹೀಗೆ ಮೇಲಿಂದ ಮೇಲೆ ಎದ್ದು ಸರಕಾರದ ಉತ್ತರ ಕೇಳಲು ಅಡಚಣೆ ಮಾಡುವುದು ಸರಿಯಲ್ಲ. ಮತ್ತು ಮುಖ್ಯಮಂತ್ರಿಗಳು ಯಿಲ್ಡಾಗದೇ ಇರುವಾಗ ತಾವು ಮಧ್ಯದಲ್ಲಿ ಎದ್ದು ನಿಂತು ಮಾತಾಡಲು ಹೋದರೆ ಅದು ಯಾವುದು ಪ್ರೊಸೀಡಿಂಗ್ಸ್‌ನಲ್ಲಿ ರಿಕಾರ್ಡಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ : ಮೊನ್ನೆ ಮುಖ್ಯ ಮಂತ್ರಿಗಳು ಇಲ್ಲಿ ಹೇಳುವಾಗ ಕೆಲವು ಮಾತುಗಳನ್ನು ಹೇಳುತಾ ಇವೆಲ್ಲಾ ಪ್ರೊಸೀಡಿಂಗ್ಸ್‌ನಲ್ಲಿವೆ ಅದನ್ನು ನೋಡಬಹುದು ಎಂದು ಹೇಳಿದರೆ ಅದನ್ನು ನಾವು ಪ್ರತಿಭಟನೆ ಮಾಡಬೇಕಾಗಿ ಬರುತ್ತದೆ. ಇದರಿಂದ ದೇಶಕ್ಕೆ ಕಳಂಕ ಬಂದಂತಾಗುವುದಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್ : ಮಾನ್ಯ ಸದಸ್ಯರಾದ ಶ್ರೀ ಕೃಷ್ಣನ್‌ರವರು ಇಂಟರ್‌ನ್ಯಾಷನಲ್ ಫೀಲ್ಡ್‌ನಲ್ಲಿ ಫೇಮಸ್ ಆಗಬೇಕೆಂದು ಇಲ್ಲಿ ಹೇಳಬಹುದು. ಅವರು ಹೇಳುವುದನ್ನು ಕೇಳಿದ್ದೇನೆ. ಜನರು ಏನು ಹೇಳುತ್ತಿದ್ದಾರೆನ್ನುವುದನ್ನು ಕೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್ : ಮಾನ್ಯ ಮಂತ್ರಿಗಳು ಬೆಂಗಳೂರು ನಗರದ ಬೀದಿಗಳಲ್ಲಿ ಬನ್ನಿ ಜನ ಏನು ಹೇಳುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್ : ಬೆಂಗಳೂರು ನಗರದಲ್ಲಿ ಜನ ಏನು ಹೇಳುತ್ತಿದ್ದಾರೆ. ಅದನ್ನೂ ಕೇಳಿದ್ದೇನೆ ಮತ್ತು ಅದರ ಬಗ್ಗೆ ನನಗೂ ಸ್ವಲ್ಪ ಗೊತ್ತಾಗಿದೆ. ತಾವು ಅದನ್ನೆಲ್ಲಾ ಇಲ್ಲೇ ಆಗಲೇ ಹೇಳಿದ್ದೀರಿ. ನಾನು ಈಗ ಹೇಳುವುದನ್ನೇಕೆ ಸ್ವಲ್ಪ ಕೇಳಬಾರದು ? ಇದರಲ್ಲಿ ಯಾರನ್ನೋ ತೋರಿಸಿ ಹೇಳುತ್ತಿದ್ದಾರೋ ಏನೋ ಎನ್ನುವಂತೆ ಕಾಣುತ್ತದೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ : ತಾವು ಹೇಳುವ ಈ ಮಾತಿಗೆ ನಮ್ಮ ಪ್ರತಿಭಟನೆ ಇದೆ. ಯಾರ ಮೇಲೋ ಹೇಳುವಂತೆ ಹೇಳುವುದು ಅದು ಅಕ್ಷಮ್ಯ ಅಪರಾಧವಾಗುತ್ತದೆ. ಅಧಿಕಾರ ನಿಮ್ಮ ಕೈಯಲ್ಲಿರುವಾಗ ಅವರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳುವುದು ತಮಗೆ ಸೇರಿದ್ದು.

ಶ್ರೀ ಎಸ್. ಬಂಗಾರಪ್ಪ : ತಾವು ಗುರುತರವಾದ ಅಪಾದನೆ ಮಾಡುತ್ತಿದ್ದೀರಿ. ಆ ರೀತಿ ಮಾಡುವುದು ಸರಿಯಲ್ಲ.

ಶ್ರೀ ಜಿ. ಪುಟ್ಟಸ್ವಾಮಯ್ಯ :—ಇಲ್ಲಿ ಯಾರನ್ನೊ ಮುಚ್ಚಿಟ್ಟುಕೊಂಡು ಹೇಳುತ್ತಿರುವಂತೆ ಭಾಸವಾಗುತ್ತದೆ ಎಂದರೆ ತಾವು ಗೃಹ ಶಾಖೆಯನ್ನು ಇಟ್ಟುಕೊಂಡಿರುವುದರಿಂದ ಇದರ ಬಗ್ಗೆ ಪತ್ತೆ ಮಾಡುವುದು ನಿಮಗೆ ಸೇರಿದ್ದು. ಇಡೀ ದೇಶದ ಪಾಲನೆ ನಿಮಗೆ ಸೇರಿರುವುದರಿಂದ ತಾವು ಇದನ್ನು ಮಾಡಬೇಕು. ವಿರೋಧ ಪಕ್ಷದವರಿಗೇನು ಗೊತ್ತಾಗುತ್ತದೆ. ಈ ರೀತಿ ಹೇಳಿದರೆ ಅದನ್ನು ನಾವು ಪ್ರತಿಭಟಿಸಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್ :—ವಿರೋಧ ಪಕ್ಷದವರು ಹೇಳುವುದರಿಂದ ಇದು ಭಾಸವಾಗುತ್ತದೆ ಎಂದು ಹೇಳಿದರು. ನಾವು ಯಾರೂ ಅದನ್ನು ಹೇಳಲಿಲ್ಲ.

ಶ್ರೀ ಡಿ. ದೇವರಾಜ ಅರಸ್ :—ನೀವು ಬೇಕಾದಷ್ಟು ಹೇಳಿದ್ದೀರಿ, ನಾವು ಕೇಳಿದ್ದೇವೆ. ಮತ್ತು ನಾವು ಹೇಳುವಾಗ ಸ್ವಲ್ಪ ಸಾವಧಾನದಿಂದ ಕೇಳಿ ಸ್ವಾಮಿ

ಅಷ್ಟರೊಳಗೇಕೆ ಇಷ್ಟು ಅಸಮಾಧಾನ ಮಾಡಿಕೊಳ್ಳಬೇಕು ? ಪೋಲೀಸು ಇಲಾಖೆಯವರು ಇವರನ್ನು ಹಿಡಿಯುವುದರಲ್ಲಿ ವಿಫಲರಾಗಿದ್ದಾರೆ, ಆದುದರಿಂದ ಇಡೀ ರಾಜ್ಯದ ಪೋಲೀಸು ಇಲಾಖೆ ಹೊಂದಿರುವ ಮುಖ್ಯ ಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಹೇಳಿದ್ದರಿಂದ ಇಲ್ಲಿ ಒಂದು ಮಾತು ಹೇಳಿದರು. ನಾನು ಇದರ ಬಗ್ಗೆ ಮೊದಲೇ ಅರಿಕೆ ಮಾಡಿಕೊಂಡೆ. ಇದನ್ನು ಪೋಲೀಸು ಇಲಾಖೆಯವರು ಹಿಡಿಯುವುದಕ್ಕಾಗಲಿಲ್ಲ ಎಂದು ಹೇಳಬಹುದು. ಮೊದಲನೇದಾಗಿ ಇದನ್ನು ಯಾರು ಮಾಡಿದ್ದಾರೆನ್ನುವುದು, ಇದನ್ನು ನಾವು ಕಾನೂನು ಹಾಗೂ ರಾಜ್ಯದ ನ್ಯಾಯ ದೃಷ್ಟಿಯಿಂದ ನೋಡುವುದಾದರೆ ಅವರು ನಮ್ಮ ಎದುರಿಗೆ ಬರಬೇಕು ಎನ್ನುವ ಅಗತ್ಯವೇನೂ ಇಲ್ಲ ಎನ್ನುವುದನ್ನು ನಾನು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ.

ಎಲ್ಲಿಯವರೆಗೆ ಯಾವ ಒಂದು ವ್ಯಕ್ತಿಯ ಮೇಲೆ ಆಪಾದನೆ ಇಲ್ಲವೋ ಕಾನೂನು ರೀತ್ಯ ಅವರ ಮೇಲೆ ಜಾರಿ ಮಾಡತಕ್ಕ ವಿಚಾರವಿಲ್ಲವೋ ಅಲ್ಲಿಯವರೆಗೆ ಅವರು ಪೋಲೀಸರಿಗೆ ಸಿಕ್ಕಬಹುದು, ಇನ್ನೊಬ್ಬರಿಗೆ ಸಿಕ್ಕಬಹುದು, ಸಿಕ್ಕದೆ ಇರಲೂ ಬಹುದು. ಅವರನ್ನು ಹುಡುಕಬೇಕಾದ್ದು ಏಕೆ ಎಂದು ಒಂದಾವರ್ತಿಯಲ್ಲ, ಎರಡಾವರ್ತಿಯಲ್ಲ, ಅನೇಕ ಸಲ ಹೇಳಿದ್ದೇನೆ. ಅವರನ್ನು ಹುಡುಕಬೇಕು ಎಂದರೆ ಏನೋ ಪೋಲೀಸಿನವರು ಒಬ್ಬ ಅಪರಾಧಿಯನ್ನು ಹುಡುಕುವ ದೃಷ್ಟಿಯಿಂದ ಹುಡುಕುವುದಕ್ಕೆ ಸಾಧ್ಯವೇ ಇಲ್ಲ. ಆ ದೃಷ್ಟಿಯಿಂದ ಹುಡುಕುವುದು ಅಪ್ರಕೃತ ಮತ್ತು ಕಾನೂನುಬಾಹಿರವಾದ ವಿಚಾರ. ನಾವು ಏತಕ್ಕಾಗಿ ಅವರನ್ನು ಹುಡಕಬೇಕು ಎಂದು ಹೇಳಿದ್ದೇನೆಂದರೆ ಶ್ರೀಮಾನ್ ಕಿತ್ತೂರ್ ಅವರು ಈ ಒಂದು ಪ್ರಶ್ನೆಯಲ್ಲಿ ರಾಜೀನಾಮೆ ಕೊಟ್ಟರು. ಆ ರಾಜೀನಾಮೆಯನ್ನು ತೆಗೆದುಕೊಳ್ಳುವ ಕಾಲದಲ್ಲಿ ಅವರು ನಿರಪರಾಧಿ ಎಂದು ಈ ಸಭೆಯಲ್ಲಿ ಹೇಳಿದೆ. ಆದಾದಮೇಲೆ ಪೋಲೀಸಿನವರು ಒಂದು ವರದಿ ಮಾಡಿದ ಕೆಲವು ದಿವಸಗಳ ನಂತರ, ವಿಶೇಷ ಮಾಹಿತಿ ಎಷ್ಟು ಪಡೆಯುವುದಕ್ಕೆ ಸಾಧ್ಯವಾಯಿತು. ಅಷ್ಟನ್ನೂ ಪಡೆದ ನಂತರ ಅದೇ ಮಾತನ್ನು ಪತ್ರಿಕೆಗಳ ಮೂಲಕ ಹೇಳಿದ್ದೇನೆ. ಇಂದೂ ಅದೇ ಅಭಿಪ್ರಾಯದವನು ನಾನಾಗಿದ್ದೇನೆ. ಇದರಲ್ಲಿ ಒಂದು ಸೂಕ್ಷ್ಮ ವಿಚಾರವಿದೆ. ಆ ಸೂಕ್ಷ್ಮ ವಿಚಾರವೆಂದರೆ ನಾನು ಶ್ರೀ ಕಿತ್ತೂರ್ ಅವರು ನಿರಪರಾಧಿ ಎಂದು ನಾನು ಹೇಳಿದರೂ ಕೂಡ ಲೋಕಾಪವಾದದಲ್ಲಿ, ಲೋಕದ ದೃಷ್ಟಿಯಿಂದ, ಅವರನ್ನು ನಿರಪರಾಧಿ ಎಂದು ಇವರು ಹೇಳಿದರು, ಇವರು ಮುಖ್ಯ ಮಂತ್ರಿಗಳಾಗಿ ತಮ್ಮ ಮಂತ್ರಿ ಮಂಡಲದಲ್ಲಿರತಕ್ಕವರ ಬಗ್ಗೆ ಅವರ ಪರ ವಹಿಸಿ ಹೇಳಿರಬಹುದೇನೋ ಎನ್ನತಕ್ಕ ಶಂಕೆ ಜನರ ಮನಸ್ಸಿನಲ್ಲಿ ಕೆಲವರಲ್ಲಾದರೂ ಉಳಿದೇ ಉಳಿಯುತ್ತದೆ. ಆ ಶಂಕೆಯನ್ನು ದೂರ ಮಾಡಬೇಕಾದರೆ ಆ ವ್ಯಕ್ತಿ ನಮಗೆ ಸಿಕ್ಕಿದಾಗ ಅವರಿಂದಲೇ ನೇರವಾಗಿ ಆ ವಿಷಯದ ಬಗ್ಗೆ ಇದೇನು ವಿಚಾರ, ಯಾವ ರೀತಿಯಾಗಿ ಶ್ರೀ ಕಿತ್ತೂರ್ ಅವರಿಂದಾಗಲೀ ಅಥವಾ ಇತರೆ ಯಾರಿಂದಲಾದರೂ

(ಶ್ರೀ ಡಿ. ದೇವರಾಜ ಅರಸ್)

ಆಗಲೀ ಅಪಚಾರವೇನಾದರೂ ಆಗಿದೆಯೋ ಎನ್ನುವುದನ್ನು ಅವರಿಂದಲೇ ತಿಳಿಯ ಬೇಕು. ಎನ್ನುವ ದೃಷ್ಟಿಯಿಂದ ಮಾತ್ರ ನಾನು ಆಕೆಯನ್ನು ಹುಡುಕಿಸುವ ಪ್ರಯತ್ನದಲ್ಲಿದ್ದೇನೆಯೋ ಹೊರತು ಹಾಗಿಲ್ಲದೆ ಹೋದರೆ ಕಾನೂನು ರೀತ್ಯ ಅವರನ್ನು ಹುಡುಕುವ ಪ್ರಯತ್ನ ಮಾಡಬೇಕಾಗಿಲ್ಲ. ಶ್ರೀಮಾನ್ ಬಸವಲಿಂಗಪ್ಪ ನವರು ಹೇಳಿದ ಹಾಗೆ ಅವರ ಸಂಬಂಧಿಗಳಾಗಲೀ, ತಂದೆ ತಾಯಿಗಳಾಗಲೀ, ಸ್ನೇಹಿತರಾಗಲೀ, ಅವರ ಯೋಗ ಕ್ಷೇಮದ ಬಗ್ಗೆ ಚಿಂತನೆ ಇರುವವರು ಯಾರೇ ಆಗಲೀ ಎಲ್ಲಿಯಾದರೂ ದೂರು ಕೊಟ್ಟಿದ್ದ ಪಕ್ಷದಲ್ಲಿ ನಾವು ಅವರನ್ನು ಹುಡುಕ ಬೇಕು. ಅದು ನಮ್ಮ ಜವಾಬ್ದಾರಿ. ಆದರೆ ಮಾನ್ಯ ಸದಸ್ಯರು ಅವರನ್ನು ಹುಡುಕದೆ ಇರುವುದು ಸರಿಯಲ್ಲ, ಮುಂತಾಗಿ ಏನೇನು ಹೇಳುತ್ತಿದ್ದಾರೆ. ಅದರಲ್ಲಿ ಅರ್ಥವಿಲ್ಲ ಎಂದು ನಾನು ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಾ ಗಲೀ, ಬೇರೆ ಕಡೆಯಾಗಲೀ, ಈ ಬಗ್ಗೆ ಯಾರೂ ದೂರು ಕೊಟ್ಟಿಲ್ಲ. ಹೀಗಿರ ಬೇಕಾದರೆ ನಾವು ನಮ್ಮ ರಾಜ್ಯದಲ್ಲಿ ಇಲ್ಲದೆ ಇರತಕ್ಕವರನ್ನು ಹುಡುಕುವುದು ಹೇಗೆ ? ಎಲ್ಲಿದ್ದಾರೆ ಎನ್ನುವ ಅನುಮಾನ ನಮಗೆ ಬಂದಿದ್ದರೆ ನಾನೇ ಹೇಳುತ್ತಿದ್ದೆ. ನನಗೆ ತಿಳಿದ ಮಟ್ಟಿಗೆ ಆ ವ್ಯಕ್ತಿ ನಮ್ಮ ರಾಜ್ಯದಲ್ಲಿಲ್ಲ. ಬೇರೆ ಎಲ್ಲಿದ್ದಾರೆಯೋ ಗೊತ್ತಿಲ್ಲ. ನಮ್ಮ ಕಣ್ಣಿಗೆ ಕಾಣದೆ ಇದ್ದ ಮಾತ್ರಕ್ಕೆ ಅವರು ಇಲ್ಲ ಎಂದು ಹೇಳು ವುದಕ್ಕೆ ಸಾಧ್ಯವಿಲ್ಲ ಎಲ್ಲಿಯೋ ಇದ್ದಾರೆ. ಇಲ್ಲಿಯೇ ಇದ್ದಾರೆ ಎಂದು ಮಾನ್ಯ ಸದಸ್ಯ ರಿಗೆ ಅನುಮಾನವಿದ್ದರೆ ಅವರ ಮನಸ್ಸಿಗೆ ಧೃಡಪಡತಕ್ಕ ಎವಿಡೆನ್ಸ್ ಏನಾದರೂ ಇದ್ದರೆ ದಯಮಾಡಿ ಕೊಡಲಿ ಎಂದು ನಾನು ಕೇಳುತ್ತಿದ್ದೇನೆ. ಅದನ್ನು ಆಧಾರ ವಾಗಿಟ್ಟುಕೊಂಡು ಅವರು ಎಲ್ಲಿದ್ದಾರೆ ಎಂದು ತಿಳಿಯುವುದಕ್ಕೆ ಪ್ರಯತ್ನ ಪಡೋಣ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಮಾನ್ಯ ಮುಖ್ಯ ಮಂತ್ರಿಗಳ ಮೇಲೆ ಅಪಾ ದನೆಗಳಿರುವಾಗ ಫಿರ್ಯಾದನ್ನು ಅವರಿಗೇ ಹೇಗೆ ಕೊಡುವುದಕ್ಕಾಗುತ್ತದೆ ?

ಶ್ರೀ ಡಿ. ದೇವರಾಜ ಅರಸ್ :—ನನ್ನ ಮೇಲೆ ಅಪಾದನೆ ಇದ್ದರೆ ನನಗೆ ಕೊಡಬೇಕಾಗಿಲ್ಲ ಬೇರೆ ಯಾರಿಗೆ ಬೇಕೋ ಅವರಿಗೇ ಕೊಡಲಿ. ಅವರ ಹತ್ತಿರ ಬಂಡವಾಳವಿಲ್ಲದೆ ಇರುವುದಕ್ಕೆ ಹೀಗೆಲ್ಲ ಮಾತನಾಡುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ :—ನಮ್ಮ ಹತ್ತಿರ ಬಂಡವಾಳವಿಲ್ಲವೆಂದು ಹೇಳ ತಕ್ಕ ಮಾತು ಸರಿಯಲ್ಲ. ನಮ್ಮ ಹತ್ತಿರ ಸಾಕಷ್ಟು ವಿಷಯಗಳಿವೆ. ಇದರ ಮೇಲೆ ಚರ್ಚೆಗೆ ಅವಕಾಶ ಕೊಟ್ಟರೆ ಹೇಳುತ್ತೇನೆ.

ಅಧ್ಯಕ್ಷರು:—ಮಾನ್ಯ ಸದಸ್ಯರ ಹತ್ತಿರ ಏನಾದರೂ ವಿಷಯಗಳಿದ್ದರೆ ಅದನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಕೊಡಬಹುದು.

ಶ್ರೀ ಡಿ. ದೇವರಾಜ ಅರಸ್ :—ಆ ವ್ಯಕ್ತಿಯ ಮೇಲೆ ಬಹಳ ಅನುಕಂಪ ಇರುವವರು, ಮಂತ್ರಿಗಳ ಮೇಲೆ ತುಂಬ ಅನುಕಂಪವಿರುವವರು ಎಂದು ಮಾನ್ಯ ಬಂಗಾರಪ್ಪನವರೂ ಮತ್ತು ಇತರರೂ ಹೇಳುತ್ತಿದ್ದಾರೆ. ಆದರೆ ಏನೂ ವಿಚಾರಗಳನ್ನು ಹೇಳಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ :— ನ್ಯಾಯಾಂಗ ವಿಚಾರಣೆಯನ್ನು ಮಾಡಿದರೆ ಎಲ್ಲ ವಿಚಾರಗಳನ್ನೂ ನಾವು ಹೇಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್ ; ಮಾನ್ಯ ಮುಖ್ಯ ಮಂತ್ರಿಗಳು ಬಂಡವಾಳವಿಲ್ಲವೆಂದು ಹೇಳಿದರು. ಎಷ್ಟೋ ವಿಷಯಗಳನ್ನು ಈ ಹೊತ್ತು ಹೇಳಿಲ್ಲ. ಐ.ಜಿ.ಪಿ. ಅವರಿಂದ ಮಾನ್ಯ ಮುಖ್ಯ ಮಂತ್ರಿಯವರಿಗೆ ವರದಿ ಬರುತ್ತದೆ, ನಮ್ಮ ಹತ್ತಿರ ಬರುವುದಿಲ್ಲ. ಶ್ರೀ ಕಿತ್ತೂರ್ ಅವರು ಕೂಡ ಅವರಿಗೇ ಬರೆದು ತಿಳಿಸಿದ್ದಾರೆ. ನಮಗೆ ಏನೂ ಕೊಟ್ಟಿಲ್ಲ. ಆದರೆ ನಮಗೆ ಬಂದಿರುವ ವರದಿಗಳ ಪ್ರಕಾರ, ಕೆಲವು ವಿಚಾರಗಳು ನಮಗೆ ಗೊತ್ತಾಗಿವೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಬಂದಿರುವ ವಿಚಾರಗಳನ್ನು ಸಭೆಯ ಮುಂದೆ ಇಟ್ಟರೆ ಯಾವುದು ಸರಿ, ಯಾವುದು ಸರಿಯಲ್ಲ ಎಂದು ತಿಳಿದುಕೊಳ್ಳಬಹುದು.

ಶ್ರೀ ಡಿ. ದೇವರಾಜ ಅರಸ್ :— ನಿಮ್ಮ ಹತ್ತಿರ ಇದ್ದರೆ ಕೊಡಿ

ಶ್ರೀ ಎಂ ಎಸ್. ಕೃಷ್ಣನ್ :— ಈ ಸಭೆಯಲ್ಲಿ ಚರ್ಚೆಗೆ ಅವಕಾಶ ಕೊಟ್ಟಾಗ ಕೊಡುತ್ತೇವೆ.

3-00 P.M.

ಶ್ರೀ ಡಿ. ದೇವರಾಜ್ ಅರಸ್ :— ಮಾತನಾಡುವುದು, ಬಿಡುವುದು ಬೇರೆ ವಿಚಾರ, ನಿಮ್ಮ ಹತ್ತಿರ ಏನು ಬಂಡವಾಳ ಇದೆಯೋ ಅದು ಬೇರೆ ವಿಚಾರ. ಈ ವಿಚಾರದಲ್ಲಿ ಶ್ರೀಮಾನ್ ಕಿತ್ತೂರ್‌ರವರ ಮೇಲಿರತಕ್ಕ ಪ್ರೇಮ ಮತ್ತು ಅನುಕಂಪ ಬಹಳಷ್ಟು ಪ್ರದರ್ಶನ ಮಾಡಿದ್ದೀರಿ. ಅವರ ಮೇಲೆ ಅಷ್ಟೊಂದು ಅಬಿಮಾನ ಇದ್ದರೆ. ಈಗಲೂ ಕೇಳಿಕೊಳ್ಳುತ್ತೇನೆ. ನಿಮ್ಮ ಅಭಿಮಾನ ನಿಜವಾಗಿದ್ದರೆ ಅವರು ಎಲ್ಲಿ ಇದ್ದಾರೆ ಎಂದು ತಿಳಿಯುವುದಕ್ಕೆ ಸಹಾಯಕವಾಗುವಂಥ ವರದಿ ಮಾಹಿತಿ ನಿಮ್ಮಲ್ಲಿ ಇದ್ದರೆ ದಯಮಾಡಿ ಕೊಡಿ. ಇದು ಬರೀ ಅಭಿಮಾನವನ್ನು ತೋರಿಸುವ ಪ್ರಯತ್ನವೇ ಏನು ? ಒಂದು ಕಡೆ ಮಾಹಿತಿ ಇದೆ ಎಂದು ಹೇಳುತ್ತೀರಿ, ಒಂದು ಕಡೆ ಕೊಡುವುದಿಲ್ಲ ಎಂದು ಹೇಳುತ್ತೀರಿ, ಒಂದು ಕಡೆ ಅವರ

(ಶ್ರೀ ಡಿ. ದೇವರಾಜ್ ಅರಸ್)

ಮೇಲೆ ಬಹಳ ಅಭಿಮಾನವಿದೆ ಎಂದು ಹೇಳುತ್ತೀರಿ ಹೀಗೆ ಒಂದಕ್ಕೊಂದಕ್ಕೂ ಸಂಬಂಧವಿಲ್ಲದ ಮಾತುಗಳನ್ನು ಆಡುತ್ತೀರಿ ವಿರೋಧ ಪಕ್ಷದ ಸದಸ್ಯರಲ್ಲಿ ಏನು ಮಾಹಿತಿ ಇದೆ ಎಂದು ಹೇಳುತ್ತಿದ್ದಾರೆ. ಆ ರೀತಿ ಅವರಲ್ಲಿ ಮಾಹಿತಿ ಇದ್ದರೆ ಅದನ್ನು ನನ್ನ ಮೇಲೆ ಅನುಮಾನ ಇದ್ದರೆ ನನಗೆ ಕೊಡುವುದು ಬೇಡ. ಅವರು ಸಿ. ಬಿ. ಐ. ಗೆ ಕಳುಹಿಸಿಕೊಡಲಿ ಅದು ಕೇಂದ್ರ ಸರಕಾರಕ್ಕೆ ಸಂಭಂದಪಟ್ಟ ಹಾಗೆ ಇಲಾಖೆ ಇದು. ಈ ವಿಷಯದಲ್ಲಿ ನಾವು ಪತ್ತೇದಾರಿ ಮಾಡಬೇಕೆಂದರೆ ನಮ್ಮ ರಾಜ್ಯದಲ್ಲಿ ಇದ್ದು ಮಾಡದೇ ಹೋದರೆ ಒಂದು ವಿಚಾರ. ನಮ್ಮ ರಾಜ್ಯದ ಹೊರಗಡೆ ಇದ್ದವರನ್ನು ಅಲ್ಲಿ ಒಂದು ವೇಳೆ ಇದ್ದರೆ ಅಲ್ಲಿಗೆ ಹೋಗಿ ನಾವು ಪತ್ತೇದಾರಿ ಮಾಡುವುದಕ್ಕೆ ಸಾಧ್ಯವಿಲ್ಲ. ಅದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಒಂದು ಸ್ಟೇಟಿನಿಂದ ಇನ್ನೊಂದು ಸ್ಟೇಟಿಗೆ ನಾವು ಹೋಗಿ ಹುಡುಕುವುದಕ್ಕೆ ಸಾಧ್ಯವಿಲ್ಲ. ಅವರ ಸಹಾಯ ಪಡೆಯಬೇಕು. ಸಿ.ಬಿ.ಐ. ಅವರ ವ್ಯಾಪ್ತಿಗೆ ಇಡೀ ಭಾರತ ದೇಶಕ್ಕೆ ಇರುವುದರಿಂದ ಅವರಿಗೆ ನಾವು ತಿಳಿಸಿದ್ದೇವೆ. ಶ್ರೀಮಾನ್ ಪುಟ್ಟಸ್ವಾಮಿಯವರಿಗೆ ನನ್ನ ಮೇಲೆ ವಿಶ್ವಾಸವಿದೆ ಎಂದು ನಾನು ನಂಬುತ್ತೇನೆ. ನನ್ನ ಮೇಲೆ ವಿಶ್ವಾಸ ಇಲ್ಲದೇ ಹೋದರೆ ನಂಬಿಕೆ ಇಲ್ಲದೆ ಇದ್ದವರನ್ನು ಕಂಪಲ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ ಪುಟ್ಟಸ್ವಾಮಯ್ಯ :— ತಮ್ಮಲ್ಲಿ ಗೌರವವಿದೆ. ಆದರೆ ನಿಮ್ಮ ಆಡಳಿತ ನಡೆಸುತ್ತಾ ಇರತಕ್ಕ ವೈಖರಿ ಬಗ್ಗೆ ನನಗೆ ಒಬ್ಬನಿಗೇ ಅಲ್ಲ ರಾಜ್ಯದಲ್ಲೇ ಶಂಕೆ ಬಂದು ಕೂತಿದೆ ಪ್ರಾಮುಖ್ಯವಾಗಿ ಶ್ರೀಮತಿ ಸುಮಿತ್ರಾ ದೇಸಾಯಿ ಪ್ರಕರಣದಲ್ಲಿ ನೀವು ಹೇಳುವುದನ್ನು ನಾವು ಕೇಳಿಕೊಂಡು ಕೂತುಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಡಿ. ದೇವರಾಜ್ ಅರಸ್ :— ಅಷ್ಟೊಂದು ಅಭಿಮಾನವಿರುವಾಗ ನಾನು ಒತ್ತಿ ಒತ್ತಿ ಹೇಳುತ್ತೇನೆ. ನನಗೆ ಮಾಹಿತಿ ಕಳುಹಿಸುವುದಕ್ಕೆ ಇಷ್ಟ ಇಲ್ಲದೇ ಹೋದರೆ ಸಿ. ಬಿ. ಐ.ಗೆ ಕಳುಹಿಸಿಕೊಡಿ. ಅದು ಅವರಿಗೆ ಸಹಾಯಕವಾಗುತ್ತದೆ. ಈ ಕಾರಣದಿಂದಲೇ ಕೆಲವಾರು ದಿವಸಗಳಿಂದ ನಾವು ರಾಜ್ಯದಲ್ಲಿ ಸಾಕಷ್ಟು ಪ್ರಯತ್ನ ಮಾಡಿ ಹುಡುಕಿದಾಗ್ಯೂ ಅವರು ಸಿಕ್ಕಿಲ್ಲದಿರುವುದರಿಂದ ಹೊರಗಡೆಯ ರಾಜ್ಯದಲ್ಲೂ ಕೂಡ ಕೆಲವು ಸಂದರ್ಭಗಳಲ್ಲಿ ಲೋಕಲ್ ಪೋಲೀಸರ ಸಹಾಯವನ್ನು ತೆಗೆದು ಕೊಂಡು ಹುಡುಕುವುದಕ್ಕೆ ಪ್ರಯತ್ನ ಮಾಡಿದ್ದೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :— ಮುಖ್ಯವಾಗಿ ಇಲ್ಲೇ ಇರುವುದು, ಆಡಳಿತಗಾರರ ಭವ್ಯವಾದ ಅರಮನೆಯಂಥ ಮನೆಯಲ್ಲಿ ಸುಭದ್ರವಾಗಿ ಗೊತ್ತಾಗದ

ಹಾಗೆ ಇಟ್ಟಿದ್ದಾರೆ ಎಂದು ಅನುಮಾನ ಬಂದಿದೆ ಅದನ್ನು ಸ್ಪಷ್ಟವಾಗಿ ವಿಚಾರಣೆ ಮಾಡಬೇಕೆಂದು ನಾವು ಹೇಳುವುದು.

ಶ್ರೀ ಡಿ. ದೇವರಾಜ್ ಅರಸ್ :— ಸ್ವಲ್ಪ ಹೊತ್ತು ಯೋಚನೆ ಮಾಡಿ ನಾನು ಹೇಳಿದ ಮೇಲೆ ನಿಮ್ಮ ತಲೆಗೆ ಬಂತು !

ಶ್ರೀ ಬಿ. ಪುಟ್ಟಸ್ವಾಮಯ್ಯ :— ನಾನು ಲಾಯರ್ ಅಲ್ಲ, ವ್ಯವಸಾಯ ಗಾರನ ಮಗ, ಮಾನ್ಯ ಬಸವಲಿಂಗಪ್ಪನವರಂಥ ಕಾನೂನು ಪಂಡಿತನಲ್ಲ ಅವರು ಹೇಳುವುದನ್ನು ಹಿಂಬಾಲಿಸಿಕೊಂಡು ಹೇಳುವುದು ಅಷ್ಟೇ.

ಶ್ರೀ ಡಿ. ದೇವರಾಜ್ ಅರಸ್ :— ಬೊಂಬಾಯಿ, ಶಿರಡಿ, ಪೂನಾ, ವಜ್ರೇಶ್ವರಿ, ಉಡವಾಡ್, ಮೌಂಟ್ ಅಬು, ಲಕ್ನೋ, ಡೆಲ್ಲಿ, ಜೈಪುರ, ಅಹಮ್ಮದಾಬಾದ್, ಬನಾರಿಸ್, ರುಷಿಕೇಷ್, ಹರಿದ್ವಾರ್, ಪಾಂಡಿಚೇರಿ, ತಿರುವಣ್ಣಾಮಲೈ, ಕೃಷ್ಣಗಿರಿ, ಗೋವ, ಮರ್ಮುಗೋವ, ಹುಬ್ಬಳ್ಳಿ, ಬೆಳಗಾಂ, ಬೆಂಗಳೂರು, ನಂದಿ, ಮುಂತಾದ ಕಡೆ ನಾವು ಆಕೆಯನ್ನು ಹುಡುಕುವುದಕ್ಕೆ ಪ್ರಯತ್ನ ಮಾಡಿದ್ದೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ : ತಾವು ಈಗ ಹೇಳುತ್ತಿರುವುದು ಹೇಗಿದೆ ಎಂದರೆ, ನಾವು ಚಿಕ್ಕ ಮಕ್ಕಳು ಆಗಿದ್ದಾಗ, 3 ಕಾಸು ಕೊಟ್ಟು ಮದ್ರಾಸ್ ನೋಡು, ಬೊಂಬಾಯಿ ನೋಡು ಎಂದು ಹೇಳಿದ ಹಾಗೆ ಇದೆ. ಮುಖ್ಯಮಂತ್ರಿಗಳೇ ಮದ್ರಾಸ್, ಬೊಂಬಾಯಿ ತೋರಿಸಬೇಡಿ ಸುಮಿತ್ರಾ ದೇಸಾಯಿ ತೋರಿಸಿ.

ಶ್ರೀ ಡಿ. ದೇವರಾಜ್ ಅರಸ್ : ಸುಮಿತ್ರ ದೇಸಾಯಿ ಫೋಟೋ ತೋರಿಸ ಬೇಕು ಅಷ್ಟೇ. ಅಷ್ಟೊಂದು ಭ್ರಮೆ ನಿಮಗೆ ಆಗಿದ್ದರೆ ಆಕೆಯ ಒಂದು ಚಿತ್ರವನ್ನು ಭೂತ ಕನ್ನಡಿ ಮುಖೇನ ದೊಡ್ಡದಾಗಿ ತೋರಿಸುವುದಕ್ಕೆ ಏರ್ಪಾಡು ಮಾಡುತ್ತೇವೆ ಅದನ್ನು ನೋಡಿ ಸಂತೋಷಪಡಿ. ಹೀಗೆ ನಮ್ಮ ಪ್ರಯತ್ನ ನಡೆದರೂ ಕೂಡಾ ಅವರು ಎಲ್ಲಿ ಇದ್ದಾರೆ ಎಂದು ಗೊತ್ತಾಲಿಲ್ಲ ಈ ಕಾರಣದಿಂದ ಸಿ. ಬಿ. ಐ. ಗೆ ವಿಚಾರವನ್ನು ತಿಳಿಸಿದ್ದೇವೆ. ಅವರೂ ಹುಡುಕುತ್ತಿದ್ದಾರೆ. 3 ತಿಂಗಳೂ ಅಲ್ಲ, 3 ವರ್ಷ ಆದರೂ ಸಿಕ್ಕದೇ ಇರತಕ್ಕ ಪ್ರಸಂಗಗಳು ಇವೆ. ಆ ಒಂದು ಕಾರಣ ದಿಂದ ಬಂಗಾರಪ್ಪನವರು ತಮ್ಮ ಒಂದು ಕನ್‌ಕ್ಲೂಶನ್ ಇಟ್ಟುಕೊಂಡಿರುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ಅದು ನಾವು ಒಪ್ಪತಕ್ಕ ಮಾತು ಆಗುವು ದಿಲ್ಲ. ಈಗ ಮೂರುವರೆ ತಿಂಗಳು ಆಯಿತು ಅವರು ಹುಡುಕುವುದರಲ್ಲಿ ಪೋಲೀ ಸರು ಅಧ್ಯಕ್ಷರು ಆಗಿದ್ದಾರೆ ಎಂದು ಹೇಳುವುದು ಯಾವ ತಿರಳೂ ಇಲ್ಲದ ವಾದ. ಮತ್ತೇ ಪೋಲೀಸ್ ಇಲಾಖೆಯವರು ಕೊಟ್ಟಿರತಕ್ಕ ರಿಪೋರ್ಟ್ ಮತ್ತು ಕಿತ್ತೂರ್ ಶಪರು ಹೇಳಿರತಕ್ಕ ಮಾತನ್ನು ನಮ್ಮ ಮುಂದೆ ಯಾತಕ್ಕೆ ಇಡಬಾರದು ಎಂದು

(ಶ್ರೀ ಡಿ. ದೇವರಾಜ್ ಅರಸ್)

ಒಂದು ಮಾತು ಹೇಳಿದ್ದಾರೆ. ಇತ್ತೀಚೆಗೆ ಏನೇನು ನಡೆದಿದೆ ಮತ್ತು ನಾವು ಮಾಡಿರತಕ್ಕ ಪ್ರಯತ್ನಗಳು ಏನು ಎನ್ನತಕ್ಕ ವಿಚಾರದಲ್ಲಿ ನಾನು ಇಲ್ಲಿ ಹೇಳಿಕೆ ಕೊಡುವುದಕ್ಕೆ ಸಿದ್ಧನಿದ್ದೇನೆ ಆ ಹೇಳಿಕೆಯನ್ನು ಕೊಡುವುದಕ್ಕೆ ಯಾವಾಗ ಅವಕಾಶ ಕೊಡುತ್ತೀರಿ ಆಗ ನಾನು ಓದುವುದಕ್ಕೆ ತಯಾರು. ಈಗ ನಮ್ಮ ಮುಂದಿರತಕ್ಕ ಪ್ರಸ್ತುತ ವಿಚಾರ ಏನು ಎಂದರೆ ಇದು ಜರೂರಾದ ಒಂದ ವಿಷಯ ಇಂದು ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂಬುದು. ಇಷ್ಟು ಮಾತ್ರ ಹೇಳುತ್ತೇನೆ. ಇದು ಜರೂರು ಅಲ್ಲವೇ ಎನ್ನುವ ಬಗ್ಗೆ ನಮ್ಮ ಸಲಹೆ ತೆಗೆದುಕೊಂಡು ತಾವು ತೀರ್ಮಾನಕ್ಕೆ ಬರಬೇಕು ಎನ್ನುವ ದೃಷ್ಟಿಯಿಂದ ಈ ವಿಷಯ ಹೇಳುವುದಕ್ಕೆ ಅವಕಾಶ ಕೊಟ್ಟಿದ್ದೀರಿ ಎಂದು ನಾನು ತಿಳಿದಿದ್ದೇನೆ. ಅಸೆಂಬ್ಲಿಯ ಕಾಂಡಕ್ಟ್ ಮತ್ತು ಬಿಸಿನೆಸ್ ರೂಲ್ಸ್ ಪ್ರಕಾರ ನಮ್ಮ ಸಭೆಯ ಕಾರ್ಯಕಲಾಪಗಳನ್ನು ಮುಂದೂಡಿ ಇದು ಈಗ ಜರೂರು ಆಗಿ ತೆಗೆದುಕೊಳ್ಳಬೇಕು ಎನ್ನುವ ವಿಷಯ ಯಾವರೀತಿಯಿಂದಲೂ ಆಗಲಾರದು ಎಂದು ನನ್ನ ಒಂದು ನಮ್ರ ವಿನಂತಿ. ಈ ವಿಚಾರ ಇಹಳ ದಿವಸಗಳಿಂದಲೂ ನಡೆಯುತ್ತಾ ಇದೆ. ರೀಸೆಂಟ್ ಅಕ್ಕರೆನ್ಸ್ ಅಲ್ಲ, ಇದು ಎಲ್ಲಾ ದೃಷ್ಟಿಯಿಂದ ಜರೂರಾಗಿ ತೆಗೆದುಕೊಳ್ಳತಕ್ಕ ವಿಚಾರವಲ್ಲ ಎಂದು ತಮ್ಮಲ್ಲಿ ಹೇಳುತ್ತೇನೆ.

ಶ್ರೀ ಎ. ಶರಣಪ್ಪ : ಸುಮಿತ್ರಾ ದೇಸಾಯಿ ಜೀವಂತವಾಗಿದ್ದಾಳೋ ಅಥವಾ ಸತ್ತಿದ್ದಾಳೋ ಎಂಬ ವಿಚಾರ ಏನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೋ ?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕ ಹೇಳಿಕೆಯ ಬಗ್ಗೆ ಒಂದು ಕ್ಲಾರಿಫಿಕೇಷನ್ ನಾವು ಹೇಳಬೇಕಾಗಿದೆ.

ಅಧ್ಯಕ್ಷರು : ತಾವು ಕ್ಲಾರಿಫಿಕೇಷನ್ ಬೇಕಾದರೆ ಬರೆದುಕೊಡಿ

ಶ್ರೀ ಎಂ. ಎಸ್. ಕೃಷ್ಣನ್ : ಅವರಿಂದ ಒಂದು ಕ್ಲಾರಿಫಿಕೇಷನ್ ಪಡೆಯಬೇಕು.

ಶ್ರೀ ಕಾಗೋಡು ತಿಮ್ಮಪ್ಪ :— ಕೆಲವು ವಿಷಯಗಳಲ್ಲಿ ಸರ್ಕಾರದವರು ಕರ್ತವ್ಯ ಹೇಗೆ ನಿರ್ವಹಿಸಿದ್ದಾರೆ ಎನ್ನುವ ಬಗ್ಗೆ ಮುಖ್ಯ ಮಂತ್ರಿಗಳು ಸಮಜಾಯಿಸಿ ಕೊಡತಕ್ಕ ವಿಷಯ ಇದೆ. ಆದ ದರಿಂದ ಈ ಸಭೆಯ ಎಲ್ಲಾ ಕಾರ್ಯಕ್ರಮಗಳನ್ನು ಮುಂದೂಡಿ ಇದನ್ನು ಚರ್ಚೆಗೆ ತಗೆದುಕೊಳ್ಳಬೇಕೆಂದು ಹೇಳುತ್ತೇನೆ

ಅಧ್ಯಕ್ಷರು :- ನಿಮ್ಮ ಅಹವಾಲನ್ನು ಒಂದು ಗಂಟೆ ಕೇಳಿದ್ದೇನೆ. ಮುಖ್ಯ ಮಂತ್ರಿಗಳು ಅರ್ಧ ಗಂಟೆ ಹೇಳಿದ್ದನ್ನೂ ಕೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :-ರೂಲ್ 12ರ ಪ್ರಕಾರ ಮತ್ತು 59ರ ಪ್ರಕಾರ ಸೂಚನೆಗಳನ್ನು ಕೊಟ್ಟಿರುವುದು ಇದೆ. ಮಾನ್ಯ ಮುಖ್ಯಮಂತ್ರಿಗಳು ರೂಲ್ 50ರ ಪ್ರಕಾರ ಈ ವಿಷಯವನ್ನು ಚರ್ಚೆಗೆ ತೆಗೆದು ಕೊಳ್ಳುವುದಕ್ಕೆ ಬರುವುದಿಲ್ಲ ಎಂದು ಹೇಳಿದರು. ರೂಲ್ 59ರ ಪ್ರಕಾರ ಎರಡೂವರೆ ಗಂಟೆ ಚರ್ಚೆ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ.

ಶ್ರೀ ಎಂ. ಎಸ್ ಕೃಷ್ಣನ್ :. ಇದರ ಬಗ್ಗೆ ಒಂದು ಹೇಳಿಕೆ ಕೊಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಆ ಹೇಳಿಕೆಯು ಬಗ್ಗೆ ಇನ್ನೂ ಸ್ಪಷ್ಟತೆ ಬೇಕು.

ಅಧ್ಯಕ್ಷರು :- ತಾವೆಲ್ಲರೂ ಹೇಳಿದ್ದನ್ನು ಕೇಳಿದೆ. ಮುಖ್ಯಮಂತ್ರಿಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಟೈಂ ಫಿಕ್ಸ್ ಮಾಡಿದ ದಿವಸ ವಿವರವಾಗಿ ಸ್ಟೇಟ್‌ಮೆಂಟ್ ಕೊಡುತ್ತೇನೆಂದು ಹೇಳಿದ್ದಾರೆ. ಮುಖ್ಯಮಂತ್ರಿಗಳು ಸ್ಟೇಟ್‌ಮೆಂಟ್ ಬರಲಿ, ಅದರ ಮೇಲೆ ತಮ್ಮ ಕ್ಲಾರಿಫಿಕೇಷನ್‌ಗೆ ಅವಕಾಶ ಮಾಡೋಣ. ಈಗ ಈ ವಿಷಯು ಚರ್ಚೆಗೆ ಅವಕಾಶವಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ ;- ಮುಖ್ಯಮಂತ್ರಿಗಳು ಸ್ಟೇಟ್‌ಮೆಂಟ್ ಕೊಡುತ್ತೇನೆಂದು ಹೇಳಿದ್ದಾರೆ. ನಾವು ಪ್ರಾರ್ಥನೆ ಮಾಡಿಕೊಂಡಿರುವುದು ಸ್ಟೇಟ್‌ಮೆಂಟ್ ಅಲ್ಲ. ಐ. ಜಿ. ಪಿ, ಕೊಟ್ಟಿರತಕ್ಕ ರಿಪೋರ್ಟ್ ಸಭೆಯು ಮುಂದೆ ಇಡಬೇಕು ಎಂದು ಕೇಳಿದ್ದೀವಿ.

ಶ್ರೀ ಡಿ. ದೇವರಾಜ್ ಅರಸ್ :- ತಾವು ವ್ಯವಹಾರ ಚೆನ್ನಾಗಿ ತಿಳಿದುಕೊಂಡರೆ, You will appriciate the position ಐ. ಜಿ. ಪಿ. ರಿಪೋರ್ಟನ್ನು ಯಾರೂ ತಂದು ಸಭೆಯು ಮುಂದೆ ಇಡುವುದಿಲ್ಲ That is how Government function.

ಶ್ರೀ ಕಾಗೋಡು ತಿಮ್ಮಪ್ಪ : ಅದು ನಮಗೆ ಬೇಕು. ನೀವು ಬಚ್ಚಿಡುವ ಉದ್ದೇಶದಿಂದ ಹೇಳುತ್ತಿದ್ದೀರಿ.

ಶ್ರೀ ಡಿ. ದೇವರಾಜ ಅರಸ್ : ತಾವು ರಾಜಕೀಯ ಉದ್ದೇಶದಿಂದ ಮಾತನಾಡುತ್ತಿದ್ದೀರಿ. ಆ ರಿಪೋರ್ಟನ್ನು ಯಾರೂ ಕೊಡುವುದಿಲ್ಲ. ಅದು

(ಶ್ರೀ ಡಿ. ದೇವರಾಜ್ ಅರಸ್)

ಕೊಡುವುದಕ್ಕೂ ಸಾಧ್ಯವಿಲ್ಲ. I have that responsiblity. *I*t is not for you to say that.

ಶ್ರೀ ವಾಟಾಳ್ ನಾಗರಾಜ್ : ಈ ಪ್ರಶ್ನೆ ಸಂಪೂರ್ಣವಾಗಿ ಚರ್ಚೆಗೆ ಬಂದಾಗ ಬೇಕಾದಷ್ಟು ಅಂಕಿಅಂಶ ಆಧಾರ ಇದೆ. ಆಗ ಅವನ್ನು ಹೇಳು ತ್ತೇನೆ ಒಳಗಡೆ ಇರುವುದನ್ನು ಈಗ ಎಕ್ಸ್‌ಪ್ಲೈನ್ ಮಾಡಿಲ್ಲ. ಶ್ರೀಮಾನ, ಹನುಮಂತಯ್ಯನವರು ಪಾರ್ಲಿಮೆಂಟಿನಲ್ಲಿ ಹೆಚ್ಚು ಬೆಳಕು ಚೆಲ್ಲಬೇಕು, ಎಂದೂ ರಾಜ್ಯ ಸರ್ಕಾರದವರು ಈ ವಿಷಯದಲ್ಲಿ ವಿಫಲರಾಗಿದ್ದಾರೆ, ಒಬ್ಬನೇ ಮಂತ್ರಿ ಯಲ್ಲ, ಇನ್ನೂ ಅನೇಕ ಮಂತ್ರಿಗಳಿದ್ದಾರೆ ಎಂದೂ ಹೇಳಿದ್ದಾರೆ. ಇದು ಪತ್ರಿಕೆಯಲ್ಲಿ ಬಂದಿದೆ. ನಾನು ಅರಿಕೆ ಮಾಡುವುದು ಇಷ್ಟೆ. ಚರ್ಚೆಗೆ ಇವತ್ತು ಅವಕಾಶವಾಗುವುದಿಲ್ಲವೆಂದರೆ, ನಾಳೆ ಚರ್ಚೆಗೆ ಅವಕಾಶ ಮಾಡಿಕೊಡಿ ಈ ರೀತಿ ಚರ್ಚೆಗೆ ಅವಕಾಶ ಮಾಡುವುದರಿಂದ ಇದರ ಬಗ್ಗೆ ಹೆಚ್ಚು ಬೆಳಕು ಬರುತ್ತದೆ.

ಅಧ್ಯಕ್ಷರು : ಅವರು ಸ್ಟೇಟ್‌ಮೆಂಟ್ ಕೊಡುವುದಕ್ಕೆ ಒಂದು ತಾರೀಖು ನಿಗದಿ ಮಾಡುತ್ತೇನೆ. ಇದಾದ ಮೇಲೆ ಕ್ಲಾರಿಫಿಕೇಷನ್‌ಗೆ ಅವಕಾಶ ಮಾಡಿ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮೈಸೂರು ಸರ್ಕಾರದ ಪೋಲೀಸರ ಹತ್ತಿರ ಸುಮಿತ್ರಾ ದೇಸಾಯಿಯವರ ಬಗ್ಗೆ ಬೇಕಾದಷ್ಟು ಆಧಾರಗಳಿವೆ. ರೈಲ್ವೆ ಸ್ಟೇಷನ್ ಹತ್ತಿರ ಸುಮಿತ್ರಾ ದೇಸಾಯಿಯವರನ್ನು ಅವರು ಕಂಡಿದ್ದಾರೆ ಎಂದು ಹೇಳುತ್ತೇನೆ. ಸುಮಿತ್ರಾ ದೇಸಾಯಿಯವರ ಎತ್ತರ, ಅವರ ವಯಸ್ಸು ಪ್ರತಿಯೊಂದನ್ನೂ ಪೋಲೀಸರು ಕೊಡಬೇಕಾದರೆ ಅವರಿಗೆ ಈ ವಿವರಗಳೆಲ್ಲ ಎಲ್ಲಿ ಸಿಕ್ಕಿತು ? ಬೆಂಗಳೂರು ಕಂಟೋನ್‌ಮೆಂಟ್ ಏರಿಯಾದಲ್ಲಿ ಸುಮಿತ್ರಾ ದೇಸಾಯಿ ಯವರನ್ನು ಪೋಲೀಸರೇ ಕಂಡಿದ್ದಾರೆಂದು ಹೇಳಿದ್ದಾರೆ. ಅಂಥಾದ್ದು ನೂರು ಎವಿಡೆನ್ಸ್ ಕೊಡುತ್ತೇನೆ. ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು.

ಶ್ರೀ ಡಿ. ದೇವರಾಜ್ ಅರಸ್ : ಮಾನ್ಯ ಸಭೆಯ ಗಮನಕ್ಕೆ ತಮ್ಮ ಮುಖಾಂತರ ತರುತ್ತೇನೆ. ಅವರ ಹತ್ತಿರ ಆಧಾರಗಳಿವೆ. ಅಂಕಿ ಅಂಶ ಇದ್ದರೆ ನಾನು ಹೇಳುತ್ತಾ ಇದ್ದೇನೆ, ಒತ್ತಿ ಒತ್ತಿ ಹೇಳುತ್ತಾ ಇದ್ದೇನೆ, ಅದನ್ನು ಸಿ. ಬಿ. ಐ. ಗೆ ಕಳುಹಿಸಿ ಕೊಡಬಹುದು. ಅದು ನೇರವಾಗಿ ನನ್ನ ಹತೋಟಿ ಯಲ್ಲಿರತಕ್ಕ ಇಲಾಖೆಯಲ್ಲ. ಕೇಂದ್ರ ಸರ್ಕಾರದ ಹತೋಟಿಯಲ್ಲಿರತಕ್ಕ ಇಲಾಖೆ. ಆದುದರಿಂದ ನಾನೇನಾದರೂ ಬಚ್ಚಿಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು

ಅನುಮಾನ ಇದ್ದರೆ ದಯಮಾಡಿ ಅವರಿಗೆ ಎಲ್ಲಾ ವಿವರಗಳನ್ನು ಕಳುಹಿಸಿಕೊಡಿ. ಮಾನ್ಯ ಸದಸ್ಯರು ಇಲ್ಲಿಯಾಗಲಿ ಹೊರಗಡೆಯಾಗಲಿ ತಮ್ಮಲ್ಲಿರತಕ್ಕ ಅಂಶಗಳನ್ನು ಅವರಿಗೆ ತೋರಿಸುವುದಕ್ಕೆ ಮನಸ್ಸು ಇಲ್ಲದೆ ರಾಜಕೀಯವಾಗಿ ಈ ಮಾತು ಹೇಳುತ್ತಾ ಇದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್ : ಒಂದು ವಿಷಯ ಮುಖ್ಯ ಮಂತ್ರಿಗಳು ಹೇಳಿದರು. ಐ. ಜಿ. ಪಿ. ವರದಿ ಸಭೆಯ ಮುಂದಿಡುವುದು ಸರ್ಕಾರದ ವ್ಯವಹಾರದಲ್ಲ, ಸರ್ಕಾರದ ವ್ಯವಹಾರ ಈ ರೀತಿ ನಡೆಯುವುದಿಲ್ಲ, ವರದಿ ಇಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಇವತ್ತಿನ ದಿವಸ ಕಾನ್‌ಫಿಡೆನ್ಸಿಯಲ್ ಡಾಕ್ಯುಮೆಂಟ್ ಆಗಿದ್ದರೆ ಯಾರಿಗೂ ತಿಳಿಸ ಕೂಡದು ಎನ್ನುವ ಅಭಿಪ್ರಾಯವಾಗಿದ್ದರೆ, ಅದು ಬೇರೆ ಸಮಾಚಾರ. ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುವುದೇನೆಂದರೆ, ಹೋದ ಸಾರಿ ಈ ವಿಷಯ ಚರ್ಚೆಗೆ ಬಂದಾಗ ಏನು ಹೇಳಿದರು. ಘಟನೆ ಬೆಂಗಳೂರಿನಲ್ಲಿ ನಡೆಯಿತು, ಈ ಘಟನೆ ಬಗ್ಗೆ ಐ. ಜಿ. ಪಿ. ಯವರಿಗೆ ವರದಿ ಕೇಳಿದ್ದೇವೆ, ಕಳುಹಿಸಿದರು ಅದರ ಆಧಾರದ ಮೇಲೆ ಕಿತ್ತೂರ ಅವರು ರಾಜೀನಾಮೆ ಕೊಟ್ಟರು. ಈ ಘಟನೆ ನಡೆದಿದೆಯೇ ಇಲ್ಲವೇ ಎಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಆ ವರದಿ ಇಡುವುದರಿಂದ ಅನುಕೂಲವಾಗುತ್ತದೆ. ಅನಾನುಕೂಲವಾಗುವುದಿಲ್ಲ, ಅದನ್ನು ಇಡುವುದಕ್ಕೆ ಹಿಂಜರಿಯಬಾರದು ಎಂದು ಕೇಳುವುದು.

ಶ್ರೀ ಡಿ. ದೇವರಾಜ ಅರಸ್ : ನೀವು ಕೇಳುವುದಕ್ಕೂ ಕಾರಣವಿಲ್ಲ. ನಾನು ಹಿಂಜರಿಯುವುದಕ್ಕೂ ಕಾರಣವಿಲ್ಲ. ಆ ವರದಿಯ ಆಧಾರದಿಂದ ನಾನು ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿರುವುದು.

ಶ್ರೀ ಹೆಚ್. ಎಸ್. ಸಿದ್ದಪ್ಪ :— ಈ ತಿಂಗಳು 23, 24, 25 ತಾರೀಖು ಆ ಕಡೆ ಪಕ್ಷದ ಒಬ್ಬರು ಸದಸ್ಯರಾದ ಶ್ರೀ ಗಟ್ಟಿ ಚಂದ್ರಶೇಖರವರೂ ನಾನು ಗೋವಾಕ್ಕೆ ಹೋಗಿದ್ದೆವು. ಇತ್ತೀಚೆಗೆ ಇದರ ಬಗ್ಗೆ ವಿಷಯಗಳನ್ನು ಸಂಗ್ರಹಿಸಿದ್ದೇವೆ. ಚರ್ಚೆಗೆ ಅವಕಾಶ ಕೊಟ್ಟರೆ ಸಾಕಷ್ಟು ವಿಷಯ ಹೇಳುತ್ತೇವೆ. ನಾವು ಹೋದ ದಿವಸ ಮನಿಆರ್ಡರ್ ಕಳುಹಿಸಿದ್ದಾರೆ, ಆ ಅಮ್ಮನ ಲೆಕ್ಕಕ್ಕೆ. ಆದರ ಬಗ್ಗೆ ಹೇಳುವುದಕ್ಕೆ ಚರ್ಚೆಗೆ ಅವಕಾಶ ಕೊಡಿ.

ಶ್ರೀ ಡಿ. ದೇವರಾಜ್ ಅರಸ್ :— ನಿಮ್ಮನ್ನು ಡಿಟೆಕ್ಟೀವಾಗಿ ಬೇಕಾದರೆ ಮಾಡಿಕೊಳ್ಳುವುದಕ್ಕೆ ತಯಾರಿದ್ದೇನೆ. ತಾವು ಡಿಟಕ್ಟೀವಾಗಿ ಆಕೆಯನ್ನು ಹುಡುಕಿ ಕೊಡಿ. I will be happy to appoint you as detective.

ಶ್ರೀ ಹೆಚ್. ಟಿ. ಕೃಷ್ಣಪ್ಪ : — ನಮ್ಮ ಪ್ರತಿಕ್ರಿಯೆಯನ್ನು ಅರ್ಥಮಾಡಿಕೊಳ್ಳಿ. ಮುಖ್ಯಮಂತ್ರಿಗಳು ತಮ್ಮ ಇರುವಿಕೆಯನ್ನು ಸಮರ್ಥಿಸಿಕೊಳ್ಳಬೇಕಾದರೆ, ಐ. ಜಿ. ಪಿ. ಯವರು ಏನು ಹೇಳಿದ್ದಾರೆ ಅದನ್ನು ಮುಚ್ಚುಮರೆ ಇಲ್ಲದೆ ಸಭೆಯ ಮುಂದೆ ಇಡಬೇಕು. ಇಲ್ಲದಿದ್ದರೆ ನಾವು ಸರಕಾರವನ್ನು ಕ್ಷಮಿಸುವುದಿಲ್ಲ, ಜನತೆ ಕ್ಷಮಿಸುವುದಿಲ್ಲ. ಅದನ್ನು ಹೇಳುವತನಕ ನಾವು ಸಭೆಯ ಕಾರ್ಯಕಲಾಪ ನಡೆಯುವುದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಡಿ. ದೇವರಾಜ್ ಅರಸ್ :— ಅವಕಾಶ ಕೊಡುವುದಿಲ್ಲ ಎಂದು ಏನು ತಾವು ಹೇಳುತ್ತಾ ಇದ್ದೀರಿ ಅದು it is highly an irresponsible statement coming from the leader of the Opposition.

Sri H. T. KRISHNAPPA :— The expression used by the Hon. Chief Minister is derogatory. He must take it back.

ಅಧ್ಯಕ್ಷರು : ಅದರ ಬಗ್ಗೆ ಮಾತನಾಡಲು ಅನುಮತಿ ಕೊಡುವುದಿಲ್ಲ ಎಂದು ಹೇಳಿದ್ದೇನೆ. ನಾನು ಅನುಮತಿ ಕೊಡುವುದಿಲ್ಲ ಎಂದು ಹೇಳಿದರೂ ಕೂಡ ಸದಸ್ಯರು ಮಾತನಾಡುವುದಾದರೆ, It amounts to highly an irresponsible statement

ಶ್ರೀ ಹೆಚ್. ಎಸ್. ಸಿದ್ದಪ್ಪ :— ತಾವು ಅವಕಾಶ ಕೊಡಲಿ ಎಂದು ನಾವು ಮಾತನಾಡಿದ್ದು.

ಅಧ್ಯಕ್ಷರು ;— ನಾನು ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳಿದ ಮೇಲೆ, ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಬೇಕು.

Sri H T KRISHNAPPA :— I have a right to express my feelings. The Hon. Chief Minister has said that this chapter is to be closed and hereafter there is no question of reopening this subject........

MADAM SPEAKER : -- The Hon. Member has not understood what he stated.

Sri D. DEVARAJ URS :— I am going to make a statement whenever the Speaker wants.

Sri H. T. KRISHNAPPA :— What is that the Hon. Chief Minister should place the IGPs report on the table of this House.

ಅಧ್ಯಕ್ಷರು :—ಅವರು ಈ ಬಗ್ಗೆ ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಹೇಳಿ ದ್ದಾರೆ. ಅವರು ಹಾಗೆ ಹೇಳಿರುವಾಗ ಮತ್ತು ಆ ಬಗ್ಗೆ ಒಂದು ತಾರೀಖನ್ನು ನಿಗದಿ ಮಾಡುತ್ತೇನೆಂದು ನಾನು ಹೇಳಿರುವಾಗ ಮತ್ತೆ ಏತಕ್ಕೆ ಅದೇ ವಿಷಯವನ್ನು ಪುನಃ ಎತ್ತುತ್ತೀರಿ ?

Sri M. S. KRISHNAN :— What we want is that a date for making the statement should be fixed.

ಅಧ್ಯಕ್ಷರು :— ಆ ಬಗ್ಗೆ ಒಂದು ತಾರೀಖನ್ನು ನಿಗದಿ ಮಾಡುವ ಜವಾಬ್ದಾರಿ ನಾನು ತೆಗೆದುಕೊಳ್ಳುತ್ತೇನೆ ಎಂದು ಹೇಳಿರುವಾಗ ಮತ್ತೇಕೆ ಈ ರೀತಿ ಪುನಃ ಕೇಳುತ್ತೀರಿ ?

ಶ್ರೀ ಡಿ. ದೇವರಾಜ ಅರಸ್ :- ಮಾನ್ಯ ಸದಸ್ಯರು ಉದ್ರೇಗದಲ್ಲಿರುವುದರಿಂದ ಆ ಮಾತನ್ನು ಸರಿಯಾಗಿ ಕೇಳಿಸಿಕೊಳ್ಳಲಿಲ್ಲ ಎಂದು ಕಾಣುತ್ತೆ.

MADAM SPEAKER .— Now, let us go to next item. Introduction of Bill by the Hon. Minister for Municipal Administration.

ಶ್ರೀ ಕಾಗೋಡು ತಿಮ್ಮಪ್ಪ :— ಅಧ್ಯಕ್ಷರು ಈ ಬಗ್ಗೆ ಒಂದು ಹೇಳಿಕೆಯನ್ನು ಇಂಥಾ ದಿವಸ ಮಾಡುತ್ತಾರೆ ಎಂದು ಹೇಳಿ ಬಿಟ್ಟರೆ ಒಳ್ಳೆಯದು.

ಅಧ್ಯಕ್ಷರು :— ಆಗಬಹುದು, ಆ ಜವಾಬ್ದಾರಿಯನ್ನು ತೆಗೆದುಕೊಂಡು ನಾನು ಒಂದು ತಾರೀಖು ನಿಗದಿ ಮಾಡುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ :— ಸನ್ಮಾನ್ಯ ಅಧ್ಯಕ್ಷರೇ, ನನ್ನ ವಿನಂತಿ ಏನೆಂದರೆ ಈಗ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಒಂದು ಹೇಳಿಕೆ ಕೊಡುತ್ತೇನೆ ಎಂದು ಹೇಳಿದ್ದಾರೆ. ಹಾಗೆ ಹೇಳಿಕೆ ಕೊಡುವಂಥಾ ಕಾಲದಲ್ಲಿ ಐ. ಜಿ, ಪಿ.ಯವರು ಕೊಟ್ಟಂಥ ಹೇಳಿಕೆಯನ್ನು ಸಭೆಯ ಮುಂದೆ ಕೊಡುವುದಕ್ಕೆ ಸಾಧ್ಯವಿಲ್ಲ ಅಂತ ಒಂದು ವರದಿ ಈಗಾಗಲೇ ಸಭೆಯ ಮುಂದೆ ಓದಿದ್ದಾರೆ. ಆ ವರದಿಗೂ ಮತ್ತು ಈಗ ಇರತಕ್ಕಂಥ ಅಂಶಗಳಿಗೂ ಹೋಲಿಸಿ ಕೊಂಡರೆ ಅದರಲ್ಲಿ ಹೊಂದಾಣಿಕೆ ಬರುವುದಿಲ್ಲ. ಅಂಥಾ ವರದಿಗಳು ನಮ್ಮ ಮುಂದೆ ಓದಿದರೆ ಪ್ರಯೋಜನವಾಗುವುದಿಲ್ಲ. ತನಿಖಾಧಿಕಾರಿಗಳು ಏನು ವರದಿಕೊಟ್ಟಿದ್ದಾರೆ ಅವನ್ನು ಹೇಳಬೇಕು.

ಅಧ್ಯಕ್ಷರು ;— ತಾವು ದಯಮಾಡಿ ಕುಳಿತುಕೊಳ್ಳಿ. ಅವೊತ್ತು ಸಭೆಯ ಮುಂದೆ ಇಟ್ಟಿರುವ ಸ್ಟೇಟ್‌ಮೆಂಟೇ ಬೇರೆ, ಇತ್ತೀಚೆಗೆ ನಡೆದಂಥ ಸಂಗತಿಗಳ ಮೇಲೆ ಅವರು ಸ್ಟೇಟ್‌ಮೆಂಟ್ ಮಾಡುತ್ತಾರೆ. ಆದುದರಿಂದ ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್ :— ತಾವು ಇದಕ್ಕೆ ಒಂದು ತಾರೀಖನ್ನು ನಿಗದಿ ಮಾಡುತ್ತೀರಾ ?

ಅಧ್ಯಕ್ಷರು :— ನಿಗದಿ ಮಾಡುತ್ತೇನೆ ಎಂದು ಹೇಳಿದ್ದೇನೆ

ಶ್ರೀ ಹೆಚ್. ಟಿ. ಕೃಷ್ಣಪ್ಪ : ಈ ನಿರ್ಣಯವನ್ನು ನಾವು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಈ ಬಗ್ಗೆ ಯಾವತ್ತು ಸ್ಟೇಟ್‌ಮೆಂಟ ಮಾಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬಹುದಾಗಿತ್ತಲ್ಲಾ.

ಅಧ್ಯಕ್ಷರು : ನಿಮಗೆ ಸ್ಟೇಟ್‌ಮೆಂಟ್ ಮಾಡುವುದು ಬೇಕಾಗಿಲ್ಲ ಎಂದು ತೋರುತ್ತದೆ. ಇಷ್ಟು ಮಾತ್ರ ಬೇಕಾಗಿತ್ತು ಎನ್ನುವ ಹಾಗೆ ಆಯಿತು.

(ವಿರೋಧಪಕ್ಷದ ಅನೇಕ ಸದಸ್ಯರು ಸಭಾತ್ಯಾಗ ಮಾಡಿದರು)

Re : Sale of fine quality Rice in Janata Bazar etc.,

ಶ್ರೀ ಎಂ. ಎಸ್. ಕೃಷ್ಣನ್ : ಅಧ್ಯಕ್ಷರೇ ನಾನು ಬೇರೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಅದು ಬಹಳ ಮುಖ್ಯವಾದುದು. ಅದು ಏನೆಂದರೆ ಬೆಂಗಳೂರು ನಗರದಲ್ಲಿ ಜನತಾ ಬಜಾರ್‌ನಲ್ಲಿ ಮತ್ತು ಇನ್ನು 2-3 ಕಡೆಗಳಲ್ಲಿ ಫೈನ್ ರೈಸ್ ಒಂದು ಕಿಲೋಗೆ ರೂ. 1-45 ರಂತೆ ಕಡಿಮೆ ರೇಟಿನಲ್ಲಿ ಏನು ಮಾರುತ್ತಿದ್ದಾರೆ. ಅದು ಕೇವಲ ಕೆಲವೇ ಜಾಗದಲ್ಲಿ ಅಂದರೆ ನಾಲ್ಕು ಜಾಗ ದಲ್ಲಿ ಮಾತ್ರ ಮಾರುತ್ತಿದ್ದಾರೆ ಅದು ಇನ್ನೂ ಹೆಚ್ಚು ಜಾಗದಲ್ಲಿ ವಿತರಣೆ ಆಗು ವಂತೆ ಮಾಡಬೇಕು. ಈ ರೀತಿ ಲಕ್ಷಾಂತರ ಜನ ಇರುವ ಕಡೆ ಕೇವಲ ಕೆಲವು ಜಾಗಗಳಲ್ಲಿ ಮಾತ್ರ ಮಾರಿದರೆ ತುಂಬಾ ಗಲಾಟೆಯಾಗುತ್ತದೆ. ಮೊನ್ನೆ ದಿವಸ ರಾಜಾಜಿನಗರದ ಒಂದು ಸೊಸೈಟಿಯಲ್ಲಿ ಒಂದು ದೊಡ್ಡ ಗಲಾಟೆಯೇ ಆಯಿತು. ಆದುದರಿಂದ ಈ ಬಗ್ಗೆ ಒಂದು ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳಾಗಲಿ ಅಥವಾ ಆಹಾರ ಸಚಿವೆಯರಾಗಲಿ ಕೊಟ್ಟರೇ ಒಳ್ಳೆಯದು. ಹೆಚ್ಚು ಜಾಗದಲ್ಲಿ ಕಡಿಮೆ ದರದ ಅಕ್ಕಿಯನ್ನು ಮಾರುವ ವ್ಯವಸ್ಥೆ ಮಾಡಿದರೆ ಜನಗಳಿಗೆ ಅನುಕೂಲ